# ನೇಸರು

## ತಿಂಗಳೋಲೆ

₹ 5/-

PAGES 20


JULY 2025 | Nesaru Tingalole | Vol. XLIII - 07

100 Years

## ಮೈಸೂರು ಅಸೋಸಿಯೇಷನ್ನಿನ ಶತಮಾನೋತ್ಸವದ ವರ್ಷ

## Mysore Association's Centenary Year (1926-2026)

100 Years




ಮೈಸೂರು ಅಸೋಸಿಯೇಷನ್ ಮುಂಬೈ

THE MYSORE ASSOCIATION, BOMBAY

393, Bhau Daji Road, Matunga, Mumbai - 400 019. | Tel.: 2403 7065

Email : mysoreassociation.mumbai@gmail.com

# ಕನ್ನಡ ನಾಡಿನ ಪಾರಂಪರಿಕ ತಿಂಡಿ-ತಿನಿಸುಗಳ ಮೇಳ



















ನೇಸರು ತಿಂಗಳೋಲೆ

ಸಂಪುಟ 43 | ಜುಲೈ 2025 | ಸಂಚಿಕೆ 7

# ಅವಕಾಶಗಳನ್ನು ನಾವೇ ಸೃಷ್ಟಿಸಿಕೊಳ್ಳಬೇಕಾಗುತ್ತದೆ



✍ ಡಾ. ಜ್ಯೋತಿ ಸತೀಶ್

"If opportunity doesn't knock, build a door" – Milton Berleಯ ಸಾಲುಗಳಿವು. ಅವಕಾಶಗಳು ಯಾವುದೇ ಮುನ್ಸೂಚನೆಯನ್ನು ನೀಡದೆ ನಮ್ಮ ಬಾಳಿನಲ್ಲಿ ಪ್ರವೇಶಿಸುವಂತವುಗಳು. ಇದನ್ನು ನಾವು ಸೂಕ್ತ ಸಮಯದಲ್ಲಿ ಗುರುತಿಸಿದ್ದೇ ಆದರೆ ನಮ್ಮ ಭಾಗ್ಯದ ಬಾಗಿಲು ತೆರೆದ ಹಾಗೆ. ನಮ್ಮ ಜೀವನದಲ್ಲಿ ಅವಕಾಶಗಳು ತನ್ನಿಂದ ತಾನೇ ಉದ್ಭವಾಗುವುದಿಲ್ಲ. ಅದನ್ನು ನಾವೇ ಸೃಷ್ಟಿಸಿಕೊಳ್ಳಬೇಕಾಗುತ್ತದೆ. ಮಹಾತ್ಮ ಗಾಂಧೀಜಿಯವರ ಒಂದು ಮಾತನ್ನು ಇಲ್ಲಿ ಉಲ್ಲೇಖಿಸಲೇಬೇಕು. "ನೀವು ನಾಳೆಯೇ ಸಾಯುವಿರಿ ಅನ್ನುವ ಹಾಗೆ ಬದುಕಿ, ಆದರೆ ಕಲಿಯುವಿಕೆ ಹೇಗಿರಬೇಕು ಎಂದರೆ ನೀವು ಶಾಶ್ವತವಾಗಿ ಬದುಕುತ್ತಿದ್ದೀರಿ ಅನ್ನುವ ಹಾಗೆ" ಎಷ್ಟೊಂದು ಮಾರ್ಮಿಕತೆ ಇದೆ ಈ ಮಾತಿನಲ್ಲಿ. ಇವತ್ತಿನ ಸಂದರ್ಭದಲ್ಲಿ ಜೀವನದಲ್ಲಿ ಸೋತವನು ಮತ್ತೆ ಮೇಲೇಳಲು ಪ್ರಯತ್ನಿಸುವುದಿಲ್ಲ. ಬದುಕಿಗೆ ಹಿಮ್ಮುಖರಾಗುತ್ತಾರೆ. ಇಂದು ನಾವು ಬಲ್ಬ್‌ನ್ನು ನೋಡಿದಾಕ್ಷಣ ನೆನಪಾಗುವ ಹೆಸರು ಥಾಮಸ್ ಎಡಿಸನ್. ಈತನನ್ನೂ ಸಮಸ್ಯೆಗಳು ಕಾಡದಿರಲಿಲ್ಲ. ಆರಂಭದಲ್ಲಿ ಎಡಿಸನ್ ಬಲ್ಬ್‌ನ ಬಗ್ಗೆ ಸಂಶೋಧಿಸುತ್ತಿರುವಾಗ ಎರಡು ಸಾವಿರದ ವಿವಿಧ ವಸ್ತುಗಳು ಲಭ್ಯವಾದವು. ಆದರೆ ಬಲ್ಬ್ ಕಂಡು ಹಿಡಿಯುವಲ್ಲಿ ವಿಫಲನಾಗುತ್ತಾನೆ. ಆಗ ಅವನ ಸಹಾಯಕ ದೂರುತ್ತಾನೆ. 'ನಾವು ಇಷ್ಟೆಲ್ಲ ಮಾಡಿದ್ದು ನೀರಿನಲ್ಲಿ ಹೋಮ ಮಾಡಿದ ಹಾಗೆ ಆಯಿತು' ಅಂತ. ಆಗ ಎಡಿಸನ್ ಅತ್ಯಂತ ಆತ್ಮವಿಶ್ವಾಸದಿಂದ ಹೇಳುತ್ತಾನೆ, "ಚಿಂತೆಯಿಲ್ಲ, ನಾವು ಈ ಸಂಶೋಧನೆಯ ಫಲವಾಗಿ ಬಹುದೂರ ಸಾಗಿ ಬಂದಿದ್ದೇವೆ. ಬಲ್ಬ್ ಮಾಡಲು ಬಳಸಲು ಸಾಧ್ಯವಾಗದ ಎರಡು ಸಾವಿರ ವಸ್ತುಗಳು ಇವೆ ಅಂತಾದರೂ ತಿಳಿಯಿತಲ್ಲ ನಮಗೆ" ಎನ್ನುತ್ತಾನೆ. ಆತ್ಮವಿಶ್ವಾಸವೆಂದರೆ ಇದು ನೋಡಿ. ಈ ಆತ್ಮವಿಶ್ವಾಸದಿಂದಲೇ ಮುಂದೆ ಎಡಿಸನ್‌ಗೆ ಬಲ್ಬ್ ಕಂಡು ಹಿಡಿಯಲು ಸಾಧ್ಯವಾಯಿತು. ಎಡಿಸನ್ ಒಂದು ರೀತಿಯಲ್ಲಿ ನಮಗೆಲ್ಲ ಮಾದರಿಯಾಗಿದ್ದಾನೆ.

ಒಂದಾನೊಂದು ಕಾಲದಲ್ಲಿ, ಒಂದು ಕೊಳದಲ್ಲಿ ಅನೇಕ ಕಪ್ಪೆಗಳು ವಾಸಿಸುತ್ತಿದ್ದವು. ಆ ಕಪ್ಪೆಗಳಲ್ಲಿ ಒಬ್ಬ ರಾಜನಿದ್ದ. ಒಂದು ದಿನ, ರಾಜ ಕಪ್ಪೆ ಉಳಿದ ಕಪ್ಪೆಗಳಿಗಾಗಿ ಒಂದು ಸ್ಪರ್ಧೆಯನ್ನು ಮಾಡಲು ನಿರ್ಧರಿಸಿತು. ಅದೇ ಕೊಳದಲ್ಲಿ ಒಂದು ಮರವಿತ್ತು. ರಾಜ ಕಪ್ಪೆ ಹೇಳಿತು, "ಈ ಮರವನ್ನು ಏರಿ, ಮರದ ತುದಿ ಮುಟ್ಟಿಬಂದವರನ್ನು ವಿಜಯಶಾಲಿ ಎಂದು ಕರೆಯಲಾಗುತ್ತದೆ". ಈ ಸ್ಪರ್ಧೆಯನ್ನು ಎಲ್ಲ ಕಪ್ಪೆಗಳು ಒಪ್ಪಿಕೊಂಡವು ಮತ್ತು ಮರುದಿನ ಸ್ಪರ್ಧೆಯನ್ನು ಆಯೋಜಿಸಲಾಯಿತು. ಎಲ್ಲಾ ಕಪ್ಪೆಗಳು ಈ ಸ್ಪರ್ಧೆಯಲ್ಲಿ ಭಾಗವಹಿಸಲು ಸಿದ್ಧವಾದವು. ಸ್ಪರ್ಧೆ ಆರಂಭವಾದ ತಕ್ಷಣ, ಎಲ್ಲ ಕಪ್ಪೆಗಳು ಒಂದೊಂದಾಗಿ ಮರ ಹತ್ತಲು ಪ್ರಾರಂಭಿಸಿದವು. ಕೆಲವು ಕಪ್ಪೆಗಳು ಮೇಲೆ ಹತ್ತಿದವು ಮತ್ತು ನಂತರ ಜಾರಿದವು. ಅದೇ ರೀತಿ, ಅನೇಕ ಕಪ್ಪೆಗಳು ಮೇಲೆ ಹತ್ತುತ್ತಾ, ಜಾರಿ ಬೀಳುತ್ತಲೇ ಇದ್ದವು. ಅಷ್ಟರಲ್ಲಿ ಕೆಲವು ಕಪ್ಪೆಗಳು ಸೋಲನ್ನು ಒಪ್ಪಿಕೊಂಡು ಹತ್ತುವುದನ್ನು ನಿಲ್ಲಿಸಿದವು. ಆದರೆ ಕೆಲವು ಕಪ್ಪೆಗಳು ಏರುತ್ತಲೇ ಇದ್ದವು, ಏರಲು ಸಾಧ್ಯವಾಗದವರು ಹೊರಟುಹೋದರು. ಏರಲು ಸಾಧ್ಯವಾಗದವರು, ಯಾರೂ ಅದನ್ನು ಏರಲು ಸಾಧ್ಯವಾಗುವುದಿಲ್ಲ. ಇದು ಅಸಾಧ್ಯ, ಯಾರೂ ಅದನ್ನು ಮಾಡಲು ಸಾಧ್ಯವಿಲ್ಲ ಎಂದು ಹೇಳತೊಡಗಿದವು. ಇದನ್ನು ಕೇಳಿ, ಇನ್ನೂ ಪ್ರಯತ್ನಿಸುತ್ತಿದ್ದ ಅನೇಕ ಕಪ್ಪೆಗಳು ಬಿಟ್ಟುಕೊಟ್ಟು ಸೋಲನ್ನು ಒಪ್ಪಿಕೊಂಡವು. ಆದರೆ ಇಷ್ಟೆಲ್ಲ ಇದ್ದರೂ, ಒಂದು ಕಪ್ಪೆ ಮಾತ್ರ ಪ್ರಯತ್ನಿಸುತ್ತಲೇ ಇತ್ತು. ಸತತ ಪ್ರಯತ್ನದಿಂದಾಗಿ ಅದು ಕೊನೆಗೂ ಆ ಮರವನ್ನು ಹತ್ತಲು ಸಾಧ್ಯವಾಯಿತು. ಇತರ ಕಪ್ಪೆಗಳು ಇದರಿಂದ ಆಶ್ಚರ್ಯಚಕಿತರಾಗಿ ಆ ಕಪ್ಪೆಯನ್ನು ಹೊಗಳಿದವು.

*(ಪುಟ 16ಕ್ಕೆ...)*

ಗೌ. ಸಂಪಾದಕರು
**ಡಾ. ಜ್ಯೋತಿ ಸತೀಶ್**

❖ ❖ ❖

ಸಂಪಾದಕ ಮಂಡಳಿ:
**ಡಾ. ಮಂಜುನಾಥ್**
**ಕೆ. ಮಂಜುನಾಥಯ್ಯ**
**ಕೆ. ಕಮಲ**
**ನಾರಾಯಣ ನವಿಲೇಕರ್**
**ಗಣಪತಿ ಶಂಕರಲಿಂಗ**

❖ ❖ ❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ.
– ಸಂ.

The views expressed by the contributors in this journal are theirs and not of the Association and the Association is not in anyway responsible for the same.
- Ed.

❖ ❖ ❖

ಸಂಪರ್ಕ ವಿಳಾಸ:
**ನೇಸರು**
ಮೈಸೂರು ಅಸೋಸಿಯೇಷನ್
393, ಭಾವುದಾಜಿರಸ್ತೆ, ಮಾಟುಂಗ
ಮುಂಬಯಿ – 400 019.
✆ 24037065

Email:
mysoreassociation.mumbai@gmail.com
Website:
www.mysoreassociation.in

# ಪ್ರವಾಸದ ಅನುಭವ ಕಥನ

✍ ಡಾ. ಸುಮಾ ದ್ವಾರಕಾನಾಥ್



ಈ ಸಲ ಪ್ರವಾಸ ಹೊರಡುವುದು ಸ್ವಲ್ಪ ಕಠಿಣವೇ ಆಗಿತ್ತು. ಶಾಲೆಗೆ ತಾತ್ಕಾಲಿಕ ಸೇವೆ ಆದ್ರಿಂದ ನನಗೆ ರಜೆ ಮಂಜೂರು ಮಾಡುವುದು ಕಷ್ಟವಾಗಿತ್ತು. ಮನೆಯವರಿಗೆ ಎಲ್ಲೂ ಕೆಲಸವಿಲ್ಲದ್ದರಿಂದ ಆರ್ಥಿಕ ತೊಂದರೆಯೂ ಇತ್ತು. ಜೊತೆಗೆ, ಡೊಂಬಿವಿಲಿಯ ನಮ್ಮ ಹಿರಿಯ ಗೆಳತಿಯೊಬ್ಬರು ಶಿಮ್ಲಾದ ರೆಸಿಡೆನ್ಶಿಯಲ್ ಶಾಲೆಯ ಪ್ರಿನ್ಸಿಪಲ್ ಆಗಿದ್ದರಿಂದ ಅವರ ಮನೆಯ ವಾಸ್ತವ್ಯ ಇತ್ತು. ಹಾಗಾಗಿ ಈ ಅವಕಾಶ ಬಿಡಲು ಮನಸ್ಸಿರಲಿಲ್ಲ. ನಮ್ಮ ಪ್ರವಾಸಿ ಗೆಳೆಯರ ಕುಟುಂಬಗಳು ಹೊರಡಲು ಸಿದ್ಧವಾಗಿತ್ತು. ನನ್ನನ್ನು ಎಲ್ಲಿ ಬಿಟ್ಟು ಹೋಗುತ್ತಾರೋ ಎನ್ನುವ ಆತಂಕದಿಂದ ಹೇಗೋ ದುಡ್ಡು ಹೊಂದಿಸಿ ಎಲ್ಲರಿಗಿಂತ ಮುಂಚೆ ಅವರಿಗೆ ತಲುಪಿಸಿದೆ.

ನಮ್ಮ ಪ್ರಯಾಣ ಅಮೃತ್ ಸರಕ್ಕೆ ಹೋಗಿ ಅಲ್ಲಿಂದ ಶಿಮ್ಲಾಗೆ ಹೋಗುವುದಿತ್ತು. ಎರಡು ದಿನದ ಪ್ರಯಾಣ. ಸ್ವರ್ಣಮಂದಿರಕ್ಕೆ ಭೇಟಿ ನೀಡಿ, ಅಲ್ಲಿಯ ಲಂಗರ್ ಊಟ ಮಾಡಿ, ಜಲಿಯನ್ ವಾಲಾ ಬಾಗ್ ನೋಡಲು ಹೋದೆವು. ಅಲ್ಲಿಯ ದುರಂತವನ್ನು ಮತ್ತೊಮ್ಮೆ ಅನುಭವಿಸಿ ಭಾರವಾದ ಹೃದಯದಿಂದ ವಾಪಸಾದೆವು. ಮಾರನೆಯ ಬೆಳಗ್ಗೆ ವಾಘಾ ಬಾರ್ಡರ್‌ಗೆ ರಿಟ್ರೀಟ್ ನೋಡಲು ಹೋದೆವು. ಎರಡೂ ಕಡೆಯ ಸೈನಿಕರಿಗೆ ಯಾವ ದ್ವೇಷವಿಲ್ಲದಿದ್ದರೂ ದೇಶಗಳ ವಿಂಗಡಣೆಯಿಂದ ನಡೆಯುವ ಕವಾಯತನ್ನು ನಿರ್ಲಿಪ್ತವಾಗಿ ನೋಡಬೇಕಾಯ್ತು. ಮನುಷ್ಯರೇ ಗಡಿಗಳ ಮೂಲಕ ಸೃಷ್ಟಿಸುವ ದ್ವೇಷವನ್ನು ಅರಗಿಸಿಕೊಳ್ಳಲು ತುಂಬಾ ಕಷ್ಟವಾಯಿತು.



ನಮ್ಮ ಮುಂದಿನ ಪ್ರಯಾಣ ಶಿಮ್ಲಾ ಎಂದಿದ್ದರೂ, ರೈಲಿನಲ್ಲಿಯ ಸಹ ಪ್ರಯಾಣಿಕರು, ಇಷ್ಟು ದೂರ ಬಂದು ದೇವಿಯ ದರ್ಶನ ಮಾಡದೇ ಹೋಗುವುದುಂಟೇ ಎಂದು ನಮ್ಮ ಪ್ರಯಾಣವನ್ನು ವೈಷ್ಣೋದೇವಿಯ ಕಡೆ ತಿರುಗಿಸಿದರು. ನಮ್ಮ ಪುಣ್ಯ ಎಂದುಕೊಂಡು ಎಲ್ಲರೂ ತಯಾರಾದೆವು. ಚಿಂತಾಮಣಿ ಎನ್ನುವ ಮಹಾರಾಷ್ಟ್ರದ ಅತಿಥಿಗೃಹದಲ್ಲಿ ಉಳಿದುಕೊಂಡೆವು. ಅಲ್ಲಿಯ ಊಟವೋ ಮಾರವಾಡಿ ಧಾಭಾದಲ್ಲಿ ದಪ್ಪದಪ್ಪ ಪೂರಿ ಮತ್ತು ಚನಾ ಮಸಾಲಾ. ಜೊತೆಯವರೆಲ್ಲರೂ ಲೊಟ್ಟೆ ಹೊಡೆದು ತಿಂದರೆ, ನನಗೋ ಕಷ್ಟವಾಗುತ್ತಿತ್ತು. ಅಂತೂ ಸ್ವಲ್ಪ ತಿಂದು ಕುದುರೆ ಹತ್ತಿದ್ದಾಯ್ತು. ರಾತ್ರಿ ಬೆಟ್ಟ ಹತ್ತಲು ಶುರು ಮಾಡಿದೆವು.ಮೊದಲೇ ಬೆಟ್ಟ, ಅಡ್ಡಾತಿಡ್ಡಿ ಬಂಡೆಗಳು, ಕುದುರೆಯನ್ನು ಭದ್ರವಾಗಿ ಹಿಡಿಯಬೇಕು, ಎಡಬಲ ತಿರುಗಿಸಬೇಕು . ಕುದುರೆಯವ ಜೊತೆಗಿದ್ದರೂ ಕುದುರೆಯ ಕಾಲು ಜಾರುವ ಹೆದರಿಕೆ. ರಾತ್ರಿಯಿಡೀ ದಾರಿಯುದ್ದಕ್ಕೂ ಜಾತ್ರೆ. ಬೆಳಗು ರಾತ್ರಿಯ ಪರಿವೆ ಇಲ್ಲದೆ ಜನರ ವ್ಯಾಪಾರ ವ್ಯವಹಾರ ನಡೆಯುತ್ತಿತ್ತು. ಅಂತೂ ಬೆಳಗಿನ ಜಾವ ಮೇಲೆ ತಲುಪಿದೆವು. (ಸುಮಾರು 15 ಮೈಲಿ) ಅಲ್ಲೋ ದೊಡ್ಡ ಕ್ಯೂ. ಬೆಲ್ಟು, ವಾಚು, ಮೊಬೈಲ್ ಎಲ್ಲಾ ಡಿಪಾಸಿಟ್ ಮಾಡಿ ನಿಂತೆವು. ಸುಮಾರು ಹೊತ್ತು ನಿಂತ ಮೇಲೆ ದೇವಿಯ ದರ್ಶನವಾಯಿತು.

ಶಿವನಿಗೆ ಆಹ್ವಾನವಿರದಿದ್ದ, ದಕ್ಷಯಜ್ಞ ಕುಂಡದಲ್ಲಿ ಹಾರಿದ ಸತಿಯನ್ನು ಶಿವ ಅನಾಮತ್ತಾಗಿ ಎತ್ತಿಕೊಂಡು ಸಿಟ್ಟಿನಲ್ಲಿ ಜಗತ್ತು ಸುತ್ತಿದಾಗ ಪಾರ್ವತಿಯ ದೇಹದ ಅಂಗಗಳು ಬಿದ್ದ ಜಾಗಗಳು ಪವಿತ್ರ ಸ್ಥಾನವಾಗಿದೆ. ಅಂಥ ಒಂದು ಪವಿತ್ರ ಸ್ಥಾನ ವೈಷ್ಣೋದೇವಿ. ಗುಹೆಯೊಳಗೆ ಹೋದರೂ ಆ ಸಣ್ಣ ಸಣ್ಣ ಪ್ರತಿಮೆಗಳನ್ನು ನೋಡಿ ಮುಂದೆ ಇನ್ನೂ ದೊಡ್ಡ ವಿಗ್ರಹ ಇರಬಹುದೆಂದು ಕೊಂಡೆವು. ಆದರೆ ಅದೇ ಎಂದು

ತಿಳಿದ ಮೇಲೆ ಮತ್ತೆ ಅಲ್ಲಿಯ ಸೆಕ್ಯೂರಿಟಿ ಅವರನ್ನು ಬೇಡಿಕೊಂಡು ಮತ್ತೆ ವಾಪಸ್ಸು ಬಂದು ದೇವಿಯ ದರ್ಶನ ಮಾಡಿದೆವು.

ಬರುವಾಗ ಕುದುರೆ ಬೇಡ ಎಂದುಕೊಂಡು, ತಲೆಹರಟೆ ಮಾಡಿ ಕೆಳಗಿಳಿಯಲು ಶುರು ಮಾಡಿದೆವು. ಮುಕ್ಕಾಲು ಬೆಟ್ಟ ಇಳಿಯುವುದರೊಳಗೆ ಸಾಕು ಬೇಕಾಯಿತು. ಜೊತೆಯಲಿದ್ದ ಹಿರಿಯ ಸದಸ್ಯರಿಗೆ ಬಲವಂತವಾಗಿ ಕುದುರೆಯ ಮೇಲೆ ಕೂಡಿಸಿ ಕಳಿಸಿದೆವು. ಅವರ ಕಾಲು ಊದಿ ಬಾತುಕೊಂಡಿತ್ತು. ಕೆಳಗಿಳಿಯುವ ಹೊತ್ತಿಗೆ ಎಲ್ಲರಿಗೂ ಯಾವಾಗ ಬಂದು ಬಿದ್ದೇವೂ ಎನ್ನಿಸಿತ್ತು. ಮಾರನೆ ದಿನ ಎದ್ದರೆ ಯಾರಿಗೂ ಕಾಲೆತ್ತಲು ಆಗುತ್ತಿಲ್ಲ.



ಅಲ್ಲಿಂದ ಸುಧಾರಿಸಿಕೊಂಡು ಶಿಮ್ಲಾ ಕಡೆಗೆ ಪ್ರಯಾಣ ಬೆಳಸಿದೆವು. ನಾವೆಲ್ಲಾ ನಮ್ಮ ಲಗ್ಗೇಜು, ನಾವು ಹೊರುವಷ್ಟು ಕಡಿಮೆ ಮಾಡಿಕೊಂಡಿದ್ದರೆ, ನಮ್ಮ ಗೆಳತಿಯೊಬ್ಬಳು ಅದೇನು ತಿಳಿವಳಿಕೆಯೋ ವಾಟರ್ ಕೂಲರ್ ತುಂಬಾ ನೀರು ತುಂಬಿಸಿಕೊಂಡು ಶಿಮ್ಲಾವರೆಗೂ ಬೇರೆಯವರ ಕೈಲಿ ಹೊರೆಸಿ ತಂದಿದ್ದಳು. ಅಲ್ಲಿ ನೀರನ್ನೆಲ್ಲಾ ಚೆಲ್ಲಿ ಚೀಲ ಹಗುರ ಮಾಡಿಕೊಂಡಾಯ್ತು. ನಾವಿಳಿದ ಹೋಟೆಲ್ ನಲ್ಲಿ ಸಾಸಿವೆ ಎಣ್ಣೆಯ ಕರಿದ ವಾಸನೆ ವಾಂತಿ ಬರುವಷ್ಟು ಕೆಟ್ಟದಾಗಿತ್ತು. ಅದನ್ನು ಸಹಿಸುವುದೇ ಅಸಾಧ್ಯವಾಗಿತ್ತು.

ಶ್ಯಾಮಲೆಯ ಹೆಸರಿನಿಂದ ಶಿಮ್ಲಾ ಬಂದಿದೆ. ಅದು ಹಿಮಾಚಲ ಪ್ರದೇಶದ ರಾಜಧಾನಿ. ಹಿಮಾಲಯ ಬೆಟ್ಟದ ತಪ್ಪಲಿನಲ್ಲಿರುವ ಪ್ರದೇಶ. ಬ್ರಿಟಿಷರು ಬೇಸಿಗೆಯ ಗಿರಿಧಾಮವನ್ನಾಗಿ ಬಳಸುತ್ತಿದ್ದರು. ಅಲ್ಲಿಯ ಮಾರುಕಟ್ಟೆಯೋ ಬ್ರಿಟಿಷ್ ಕಾಲದ ಮಾಲ್ ರೋಡ್. ಅಲ್ಲಿ ಎಲ್ಲಾ ದುಬಾರಿ. ಬರೀ ಒಂದು ಸುತ್ತು ಹಾಕಿ ಬಂದೆವು. ಪ್ರೇಕ್ಷಣೀಯ ಸ್ಥಳಗಳಿಗೆ ಹೋಗಬೇಕಾದರೆ ಬೆಟ್ಟಗುಡ್ಡಗಳ ನಡುವೆ ಸಣ್ಣ ಸಣ್ಣ ತಿರುವುಗಳಲ್ಲಿ, ಅಲ್ಲಿಯ ಪಡ್ಡೆ ಹುಡುಗರ ಡ್ರೈವಿಂಗ್ ಅನುಭವಿಸೇ ತಿಳಿಯಬೇಕು. ಪ್ರತಿಯೊಂದು ತಿರುವಿಗೂ ಬದುಕಿದೆಯಾ ಬಡ ಜೀವವೇ ಎಂದು ಕೊಳ್ಳುತ್ತಿದ್ದೆವು. ಮಧುಚಂದ್ರ ದಂಪತಿಗಳಿಗಾದರೆ ಒಂದು outlet. ನಾವೆಲ್ಲಾ ಜೇಷ್ಠ ನಾಗರೀಕರು, ತಾರಾದೇವಿ ಮಂದಿರ, ಸಂಕಟಮೋಚಕ ಹನುಮಾನ್ ಮಂದಿರ ನೋಡಿ ಬಂದೆವು. ಕುಲುವಿನ ಗೆಳೆಯರ ಕುಟುಂಬಕ್ಕೆ ಏನಾದರೂ ಉಡುಗೊರೆ ಕೊಡಲು ಎಲ್ಲರೂ ಸಮನಾಗಿ ಛಿಠಟಣಡಿಖಛಣಣಜ ಮಾಡಬೇಕೆಂದುಕೊಂಡೆವು. ದೊಡ್ಡವರ ಸಣ್ಣಬುದ್ಧಿ ಹೇಗೆ ವ್ಯಕ್ತವಾಗುತ್ತೆ ಅನ್ನೋದಕ್ಕೆ ಉದಾಹರಣೆ. ಇಬ್ಬರು ದಂಪತಿಗಳು ಮತ್ತು ನಾವು ಮೂವರು ಒಂಟಿಯಾಗಿ ಹೋದವರು. ಕುಟುಂಬದ ಲೆಕ್ಕ ಹಾಕೋಣ ಅಂತ ಹೇಳಿ ಗಂಡಸರಿಗೆ ಅವಮಾನವಾಗುವಂತೆ ನಮಗೂ ಅವರಷ್ಟೇ ದುಡ್ಡು ಹಾಕಿಸಿದರು. ಆದರೆ ಗೆಳೆಯರ ಮನೆಯಲ್ಲಿ ನಮಗೆಲ್ಲರಿಗೂ ಉಡುಗೊರೆ ಕೊಟ್ಟಾಗ ನನಗೆ ನಗು ಬಂತು.

ಅಲ್ಲಿಂದ ನಮಗಾಗಿ ಕುಲ್ಲು (ಕುಲು)ವಿನಲ್ಲಿ ಕಾದಿದ್ದ ಅನ್ನಪೂರ್ಣಮ್ಮನವರ ಮನೆಗೆ ಬಂದೆವು. ದಂಪತಿಗಳು ನಮ್ಮನ್ನು ಸ್ವಾಗತಿಸಲು ಬಸ್ ಸ್ಟ್ಯಾಂಡ್ ಗೇ ಬಂದಿದ್ದರು. ಸುಮಾರು ದಿನ ಸುತ್ತಾಡಿದ್ದರಿಂದ ಹೊರಗಡೆ ಊಟಮಾಡಿ ಬಾಯಿ ಕೆಟ್ಟು ಹೋಗಿತ್ತು. ಮನೆಯ ಸುತ್ತಲೂ ಬೇಲಿ ಹಾಕಿ ಬೆಳೆದ ತರಕಾರಿಯಿಂದ ಮಾಡಿದ ಅನ್ನ, ಹುಳಿಯ ರುಚಿ ಬಲು ಅಪ್ಯಾಯಮಾನವಾಗಿತ್ತು. ಅಂದು ಅವರ ಶಾಲೆಯ ವೀಕ್ಷಣೆ ಮತ್ತು ಅವರ ಗೆಳೆಯರ ಮನೆಗೆ ಭೇಟಿ ನೀಡಿದ್ದಾಯಿತು. ಮಾರನೆದಿನ ವ್ಯಾಸ ಮಂದಿರ, ಬಿಯಾಸ್ ನದಿ, ಮನುವಿನ ಮಂದಿರ, ಪಾಕಿಸ್ತಾನಕ್ಕೆ 15 ಕಿ.ಮೀ. ದೂರ ಇರುವ ಲ್ಹೆ ಲಡಾಕ್, ವಿಚಿತ್ರವೆನಿಸುವ ಮಹಾದೇವ ಮಂದಿರ. ನೋಡಿ ಬಂದೆವು.

ಮಾರನೆ ದಿನ, ಹಿಡಿಂಬಾ ಮಂದಿರದ ದರ್ಶನವಾಯಿತು. ಇನ್ನೊಂದು ಪವಾಡ ಹೇಳಲೇ ಬೇಕು. ಮಗಳ dressಗೆ ಅಂತ, ಜೋಪಾನವಾಗಿ, ಅತ್ಯಂತ ಕಾಳಜಿಯಿಂದ ಕೂಡಿಟ್ಟುಕೊಂಡಿದ್ದ 2000 ರೂಪಾಯಿಯ ಸಣ್ಣ ಪರ್ಸ್, ಬ್ಲೌಸ್ ಒಳಗೆ ಎಂದೂ ಇಟ್ಟುಕೊಳ್ಳದವಳು, ಕಳ್ಳರ ಭಯದಿಂದ ಇಟ್ಟುಕೊಂಡಿದ್ದು, ಮಾರುಕಟ್ಟೆಯ ಅಪಾರ ಜನಸಂದಣಿಯ ನಡುವೆ ಬಿದ್ದು ಹೋಯಿತು. ನನ್ನ ಹಿಂದೆ ಬರುತ್ತಿದ್ದ ಒಬ್ಬ ಮಹನೀಯರು ತಕ್ಷಣ ನನ್ನನ್ನು ಬೆನ್ನು ತಟ್ಟಿ ಎಚ್ಚರಿಸಿದರು. ಮನೆಯವರಿಗೆ ಕೆಲಸವಿಲ್ಲದೆ ಹಣದ ಕೊರತೆ ಇದ್ದ ಆ ಕಾಲದಲ್ಲಿ ನನಗಂತೂ

ಅವರು ದೇವರಂತೇ ಕಂಡರು. ಮೊದಲು ಅಂಗಡಿಗೆ ಹೋಗಿ ಮಗಳಿಗೆ ಡ್ರೆಸ್ ತೆಗೆದುಕೊಂಡು ಸಮಾಧಾನದ ಉಸಿರು ಬಿಟ್ಟೆ. ಇವತ್ತಿಗೂ ನೆನೆಸಿಕೊಂಡರೆ ಕಷ್ಟಪಟ್ಟ ಹಣ ಸಿಕ್ಕಿದ್ದು ದೇವರ ದಯೆಯೇ ಅಲ್ಲದೆ ಮತ್ತೇನಲ್ಲ.

ಮೂರನೆಯ ದಿನ ಮಣಿಕರ್ಣಿಕಾ ಘಾಟ್‌ಗೆ ಹೋದೆವು. ದಾರಿಯುದ್ದಕ್ಕೂ ಮೋರಿ ನೀರಿನಂತೆ ಹರಿಯುತ್ತಿದ್ದ ನದಿ ಮೋಡ ಸ್ಫೋಟವಾದಾಗ ಎಡಬಲ ದಂಡೆಗಳನ್ನು ಮೀರಿ, ಪ್ರವಾಹದಿಂದ ಊರೇ ಕೊಚ್ಚಿ ಹೋದರೂ ಮತ್ತೆ ಕಟ್ಟುವ ಅವರ ಕಾಯಕಕ್ಕೆ ತಲೆಬಾಗಲೇ ಬೇಕಾಯಿತು. ಮಣಿಕರ್ಣಿಕಾ ಘಾಟ್‌ನಲ್ಲಿನ ವಿಶೇಷವೇನೆಂದರೆ ಬಿಸಿನೀರಿನ ಬುಗ್ಗೆ. ಗಂಡಸರಿಗೆ ಮತ್ತು ಹೆಂಗಸರಿಗೆ ಬೇರೆ ಬೇರೆ ಸ್ನಾನದ ತೊಟ್ಟಿಗಳನ್ನು ಮಾಡಿದ್ದಾರೆ. ಗಂಧಕದ ನೀರಾದ್ದರಿಂದ ಹೆಚ್ಚು ಹೊತ್ತು ನೀರಿನಲ್ಲಿಇರಲಾಗಲಿಲ್ಲ. ಗುರು ದ್ವಾರದ ಮುಂದೆ ಬಂದರೆ ಕುದಿಯುವ ನೀರಿನ ತೊರೆ. ಅದರಲ್ಲಿ ಅಲ್ಲಿ ಕೊಡುವ ಪುಟ್ಟ ಪುಟ್ಟ ಚೀಲದ ಅಕ್ಕಿಯನ್ನು ನೀರಿನಲ್ಲಿ ಹಿಡಿದರೆ ಬೆಂದು ಅನ್ನವಾಗುತ್ತಿತ್ತು. ಅದನ್ನೇ ಪ್ರಸಾದವೆಂದು ಕೊಡುತ್ತಿದ್ದರು.

ಅಲ್ಲಿಯ ಇನ್ನೊಂದು ಘಟನೆ ನನ್ನನ್ನು ನಡುಗಿಸಿತು. ಎರಡೂ ಕಡೆಯೂ ಸ್ಟೀಲ್ ರಾಡ್ ಗಳನ್ನು ಹಾಕಿ ಕ್ಯೂನಲ್ಲಿ ಗುರುದ್ವಾರಕ್ಕೆ ಹೋಗುವ ದಾರಿಯಲ್ಲಿ, ಒಂದು ಗೂಳಿ ನುಗ್ಗಿ ಬಂದು ನನ್ನನ್ನು ಕೊಂಬಿನಲ್ಲಿ ಸಿಕ್ಕಿಸಲು ಪ್ರಯತ್ನಿಸಿತು. ಜೋರಾಗಿ ಅದನ್ನು ಹಿಂದೆ ನೂಕಿ, ನಾನು ಹಿಂದೆ ಓಡಿದೆ. ಅಷ್ಟರಲ್ಲಿ ಅದನ್ನು ಹಿಡಿದುಕೊಂಡು ಹೋದರು. ಹೀಗೆ ನಾನು ಸ್ವಲ್ಪದರಲ್ಲೇ ಅಪಾಯದಿಂದ ಪಾರಾದೆ.

ಅಲ್ಲಿಂದ ದೆಹಲಿಗೆ ಬಸ್ ನಲ್ಲಿ ನಮ್ಮ ಪಯಣ. ಅಲ್ಲಿ ನನ್ನ ತಮ್ಮ ಇದ್ದುದರಿಂದ ಅವರ ಮನೆಗೆ ಹೋಗುವ ಏರ್ಪಾಡಾಗಿತ್ತು. ಬೆಳಗ್ಗೆ ಬಸ್ ಇಳಿದು ರಿಕ್ಷಾ ಹತ್ತಿದರೆ, ಅವನ ಮನೆ ಅಡ್ರೆಸ್ ಕೇಳಲು ಅವನ ಫೋನ್ ಸಿಕ್ತಿರಲಿಲ್ಲ. ಆಟೋಡ್ರೈವರ್ ಗಳು ಒಂದೇ ಸಮನೆ ನಮ್ಮ ತಲೆ ತಿಂದು ಬಿಟ್ಟರು. ನಿಮಗೊತ್ತಿಲ್ಲ, ಇಲ್ಲಿ ಮನೆಗಳು ತುಂಬಾ ಚಿಕ್ಕದು, ಯಾರೂ ನಿಮ್ಮನ್ನು ಸೇರಿಸೋಲ್ಲ, ಲಾಡ್ಜ್‌ಗೆ ನಡೀರಿ ಕರ್ಕೊಂಡು ಹೋಗ್ತೀವಿ ಅಂತ ಒಂದೇ ವರಾತ. ಅವರ ಹತ್ರ ದಾರಿ ಉದ್ದಕ್ಕೂ ಒಂದೇ ಗಲಾಟೆ ಮಾಡಿ ಹೇಗೋ ಅವನ ಕ್ವಾರ್ಟರ್ಸ್ ತಲುಪಿದೆವು. ಅವನು ಅಲ್ಲಿ ಎರಡು ಮನೆ ವ್ಯವಸ್ಥೆ ಮಾಡಿದ್ದ. ಡೊಂಬಿವಿಲಿಯ ಗೆಳೆಯರದೇ ಅಲ್ಲಿ ಹೋಟೆಲ್ ಇದ್ದುದರಿಂದ ಅವರು ಕರೆದು ನಮಗೆಲ್ಲಾ ಮಸಾಲೆದೋಸೆ, ಜಾಮೂನು ಎಂದು ಉಚಿತ ಆತಿಥ್ಯ ನಡೆಸಿದರು. ಹಿಂದೆ 1975ನೆಯ ಇಸವಿಯಲ್ಲಿ , ಶಾಲೆಯ ಟೂರ್ ಹೋಗಿದ್ದಾಗ ಆದ ಟ್ರುಚಿರಿ ನೆನಪಿಗೆ ಬಂದು ಎಲ್ಲರಿಗೂ ಹೇಳಿ ನಕ್ಕಿದ್ದಾಯ್ತು. ಕುತುಬ್ ಮೀನಾರ್ ಹತ್ತಿರ ಒಂದು ಗಾರ್ಡನ್ ನಲ್ಲಿ ಬಣ್ಣಬಣ್ಣದ ಛತ್ರಿ ನೋಡಿ ನಾವು ಬಿಸಿಲಿಗೆ ಜ್ಯೂಸ್ ಕುಡಿಯಲು ಕೂತೆವು. ಅಲ್ಲೇ ಇದ್ದ ನಮ್ಮ ಮ್ಯಾನೇಜರ್ ನೂ ಕರೆದೆವು. ಅವನು ನಕ್ಕು ಹೊರಟುಹೋದ. ಅನಾನಸ್ ಜ್ಯೂಸ್ ಕುಡಿಯೋಣ ಅಂತ ಆರ್ಡರ್ ಮಾಡಿದೆವು. ಅವನು ಬಿಲ್ ತಂದುಕೊಟ್ಟಾಗ ನೋಡಿದರೆ ಒಂದು ಲೋಟಕ್ಕೆ 240 ರೂಪಾಯಿ. ಆ ಕಾಲಕ್ಕೆ 120 ರೂ. ಸಂಬಳವಿದ್ದ ನಾವು ಕಣ್ಣು ಕಣ್ಣು ಬಿಡಬೇಕಾಯ್ತು. ಬೈಕೊಂಡು ದಂಡ ತೆತ್ತು ಹೊರಬಂದೆವು. ದೂರದಲ್ಲಿ ನಮ್ಮ ಪೆಚ್ಚು ಮುಖಗಳನ್ನೇ ನೋಡುತ್ತಿದ್ದ ಮ್ಯಾನೇಜರ್ ಹೇಗಿತ್ತು ಜ್ಯೂಸ್ ಅಂದಾಗ ತಲೆತಗ್ಗಿಸಿಕೊಂಡು ಬಂದಿದ್ದೆವು. ಈ ತಮಾಷೆ ಅನುಭವವನ್ನು, ಎಲ್ಲರ ಮುಂದೆ ಹೇಳಿ ನಕ್ಕಿದ್ದೇ ನಕ್ಕಿದ್ದು. ಸುಮಾರು ಸಲ ನೋಡಿದ್ದ ಜಾಗವೇ ಆದ್ರಿಂದ ನೋಡದೇ ಇರುವವರಿಗಾಗಿ ಒಂದು ಟೂರ್ ಮಾಡಿ ಬಂದೆವು. ಕೆಲವರು ಆಗ್ರ, ಮಥುರಾಗೆ ಹೋಗಿ ಬಂದರು. ಅಲ್ಲಿ ಮೂರು ದಿನ ಇದ್ದು ಊರಿಗೆ ವಾಪಸ್ಸು ಬಂದೆವು.

ಊರಿಗೆ ವಾಪಸು ಬರುವಾಗ ಇನ್ನೊಂದು ಅವಘಡ. ಸುಮ್ಮನಿರಲಾರದೆ ನಾನು ರೈಲಿನಲ್ಲಿ ಮಸಾಲೆ ವಡೆ ಬಂದಿತೆಂದು, ಎಲ್ಲರಿಗೂ ನನ್ನಪರವಾಗಿ ಕೊಡಿಸಿದೆ. ಚೆನ್ನಾಗಿದೆಯೆಂದು ಎಲ್ಲರೂ ತಿಂದರು. ನಮ್ಮ ಮ್ಯಾನೇಜರ್ ಮೂರ್ತಿ, ಟಿ.ಸಿ. ಬಂದನೆಂದು ಟಿಕೆಟ್ ಕೈಲಿ ಹಿಡಿದಿದ್ದವರು, ವಡೆತಿಂದು ಟಿಕೆಟ್‌ನಿಂದ ಕೈ ವರೆಸಿಕೊಂಡು ಕಿಟಕಿಯಿಂದ ಹೊರಹಾಕಿಬಿಟ್ಟರು. ಟಿ.ಸಿ. ಬಂದರೆ ಟಿಕೆಟ್ ಇಲ್ಲ. ಬಹುಶಃ ನಾವು ನಾಸಿಕ್ ದಾಟಿದ್ದೆವೇನೋ, ಕಲ್ಯಾಣ್ ಬರಲು ಇನ್ನೂ ಟೈಮ್ ಇತ್ತು. ಏನು ಮಾಡಬೇಕು. ಎಲ್ಲರೂ ಪೆಚ್ಚಾದೆವು. ಎಲ್ಲರ ದುಡ್ಡೂ ಖರ್ಚಾಗಿ ಹೋಗಿತ್ತು. ಸುಮಾರು ಏಳು ಜನರ ದೆಹಲಿಯಿಂದ ಟಿಕೆಟ್. ಆಗ ಮೊಬೈಲ್, Gpay, ಇರಲಿಲ್ಲವಾಗಿತ್ತು. ಕೊನೆಗೆ ನಮ್ಮ ಸಹ ಪ್ರಯಾಣಿಕರೊಬ್ಬರು, ತಾವು ಕೊಡುತ್ತೇನೆಂದು ಹೇಳಿದರು. ಮೂರ್ತಿ, ನಾಗರಾಜನಿಗೆ ಮನೆಗೆ ಫೋನ್ ಮಾಡಿ ದುಡ್ಡು ತಂದು ಕಲ್ಯಾಣ್ ಸ್ಟೇಷನ್ ನಲ್ಲಿರಲು ಹೇಳಿದರು. ಆ ರೈಲು ಪನ್ವೇಲ್‌ಗೆ ಹೋಗುತ್ತಿದ್ದುದರಿಂದ ಅವರಿಗೆ ಅಲ್ಲೇ ದುಡ್ಡು ಕೊಡಬೇಕಾಗಿತ್ತು.ನಾಗರಾಜ ಮುಂಚೆಯೇ ಬಂದು ಹಣ ಕೈಲಿ ಹಿಡಿದು ನಿಂತಿದ್ದ. ಸದ್ಯ ಅವರ ಕೈಗಿತ್ತು ಋಣಮುಕ್ತವಾದೆವು. ಹೀಗೆ ಕಹಿ ಅವಾಂತರಗಳಾದರೂ ಪ್ರವಾಸದ ನೆನಪು ಮಾತ್ರ ಸಿಹಿ.

# ದೇವರೇ ಕೊಟ್ಟ ನೆಲ



✍ ಡಾ. ಮಂಜುನಾಥ್

ಈಗ ಮಧ್ಯ ಏಷಿಯಾದಲ್ಲಿ ನಡೆಯುತ್ತಿರುವ ಯುದ್ಧದ ಹಿನ್ನೆಲೆ ತಿಳಿಯುವುದು ಒಳಿತು. ಮುನ್ನ ಐದು ಸಾವಿರ ವರ್ಷಗಳ ಹಿಂದಿನ ಮಾತು. ಅಬ್ರಹಾಂ ಎಂಬುವನು ತನ್ನ ಹೆಂಡತಿ ಮಕ್ಕಳೊಂದಿಗೆ ಈಗಿನ ತುರ್ಕಿಯ ನಾಡಿನ ದಕ್ಷಿಣ ಭಾಗದಲ್ಲಿ ಮರಳು ಕಾಡಲ್ಲಿ ಇದ್ದವನು. ನೀರು, ನೆಲ ಇಲ್ಲದ ಈ ಜಾಗದಲ್ಲಿ ಬಳಲಿ ಅವನು ತನ್ನ ಹೆಂಡತಿ ಮಕ್ಕಳೊಂದಿಗೆ ಒಳ್ಳೆಯ ನೀರು ನಿಡಿ ಇರುವ ನೆಲವನ್ನು ಹುಡುಕುತ್ತಾ ಹೊರಡುತ್ತಾನೆ. ಅವನು ಈಗಿನ ಇರಾಕ್ ಮರಳುಗಾಡಿಗೆ ಬಂದಾಗ ಸೋತು ಅಲ್ಲಿಯೇ ಕುಸಿದು ಆ ದೇವನನ್ನು ಪ್ರಾರ್ಥಿಸುತ್ತಾನೆ. 'ನನ್ನನ್ನು ಈ ಕಷ್ಟದಿಂದ ಪಾರು ಮಾಡು' ಎಂದು. ದೇವ ಮೆಚ್ಚಿ ಅವನಿಗೆ ಗೋಚರಿಸುತ್ತಾನೆ. "ಏನು ಬೇಕು ನಿನಗೆ"? ಆದರೆ ನೀನು ನನ್ನನ್ನು ಏನು ಕೇಳುವ ಮೊದಲು, ನೀನು ನಿನ್ನ ನಿಯತ್ತನ್ನು ತೋರಬೇಕು". "ಆಗಲಿ ದೇವ, ನೀನು ಹೇಳಿದಂತೆ ಮಾಡುತ್ತೇನೆ". ಹಾಗಿದ್ದರೆ ನೀನು ನಿನ್ನ ಹಿರಿಯ ಮಗನನ್ನು ನನಗೆ ಬಲಿ ನೀಡಬೇಕು". "ಆಯಿತು" ಎಂದು ಅಬ್ರಹಾಂ ಕತ್ತಿ ತೆಗೆದು ಮಗನ ತಲೆಯನ್ನು ಕತ್ತರಿಸಿ ದೇವರ ಕಾಲಿನ ಬಳಿ ಇಟ್ಟ. ದೇವರು ಮೆಚ್ಚಿ "ನಿನಗೆ "ಮೂರು ವರಗಳನ್ನು ಕೊಡುತ್ತೇನೆ, ಕೇಳು". ಅಬ್ರಹಾಂ, "ಹಾಗಿದ್ದರೆ ಮೊದಲಿಗೆ ನನ್ನ ಮಗನನ್ನು ಮತ್ತೆ ಜೀವ ಕೊಟ್ಟು ಉಳಿಸು". "ಅಂತೆಯೇ ಆಗಲಿ" ಅಬ್ರಹಾಂ: ಮೂರನೆಯದಾಗಿ, ನನಗೆ ನೀನೇ ಮಾತುಕೊಟ್ಟು ಇತ್ತ ನೀರು–ನಿಡಿ–ಗಿಡ–ಮರ–ಹಕ್ಕಿ–ಮೃಗಗಳಿರುವ ನಾಡು ನನಗೆ ಈಯಬೇಕು. ದೇವ: ಆಗಲಿ ಆದರೆ ಅದರ ಮುನ್ನ ನೀನು ನನಗೆ ಎರಡು ಮಾತು ಕೊಡಬೇಕು. ಒಂದು ನೀನು ನಿನ್ನ ಸಂತತಿ ಎಂದೂ ನನ್ನನ್ನೇ ಪೂಜಿಸಬೇಕು. ಇನ್ನಾವ ದೇವನನ್ನೂ ಕೂಡದು. ಅಂತೆಯೇ ನೀನು ನಿನ್ನ ಸಂತತಿ ನಿಮ್ಮ ಲಿಂಗದ ಮುಂದೊಗಲುಗಳನ್ನು ಕತ್ತರಿಸಿಕೊಳ್ಳಬೇಕು". ಆಗಲಿ ದೇವ ನೀನೆಂದತೆಯೇ ಆಗಲಿ. ಹಾಗಿದ್ದರೆ ಮುನ್ನೆಡೆ, ನೀನು ನಡೆದಂತೆ ನಾನು ದಾರಿ ತೋರುವೆ.

ಅಬ್ರಹಾಂ ದೇವ ಹೇಳಿದಂತೆ ಮುನ್ನೆಡೆಯುತ್ತಾ ಬಂದು ಈಗಿನ ಇಸ್ರೇಲ್ – ಲೆಬನಾನ್ ಬಳಿಗೆ ಬಂದು ಸೇರಿದ. ಅಲ್ಲಿದ್ದ ನೀರು–ನಿಡಿ–ಗಿಡ ಮರಗಳನ್ನು ನೋಡಿ ಬೆರಗಾಗಿ "ಇದು ದೇವ ಮಾತುಕೊಟ್ಟ ನೆಲ" ಎಂದು ಅಲ್ಲಿಯೇ ನೆಲೆಸಿದ. ಅದು ಅಂದಿನ ಯುರೇಸೇಲೇಂ ಆಯಿತು. ಈ ಸ್ಥಳ ಪವಿತ್ರವೆನಿಸಿ ಯೆಹೂದ್ಯರ ನೆಲೆಯಾಯಿತು.

ಯೆಹೂದಿಯರಲ್ಲಿ ಅನೇಕ ಪ್ರವಾದಿಗಳಿದ್ದಾರೆ. ಅವರಲ್ಲಿ ಅಬ್ರಹಾಂ ಮೊದಲನೆಯವನು. ಅವನಾದ ಮೇಲೆ ಇನ್ನೂ ಎಂಟು ಪ್ರವಾದಿಗಳು ಬಂದರು. ಆದರೆ ಅವರೆಲ್ಲರೂ ತಮ್ಮ ಕಟ್ಟ ಕಡೆಯ ಪ್ರವಾದಿಯ ಬರುವನ್ನು ಇನ್ನೂ ಕಾಯುತ್ತಿದ್ದಾರೆ.

ಏಸು ಜನ್ಮತಾಳಿ, ತಾನೇ ದೇವರ ಮಗನೆಂದು ಹೇಳಿದಾಗ ತಾನೇ ಕಡೆಯ ಪ್ರವಾದಿಯೆಂದು ಹೇಳಿದಾಗ, ಯೆಹೂದ್ಯರು ನಂಬಲಿಲ್ಲ. ಆಗ ಅವರು ರೋಮನ್ನರ ಆಳ್ವಿಕೆಯಲ್ಲಿದ್ದರು. ಅವರು ಈ ಏಸು ಸುಳ್ಳು ಹೇಳುತ್ತಿದ್ದಾನೆ, ಎಂದು ರೋಮನ್ನರಿಗೆ ದೂರುಕೊಟ್ಟ ಮೇರೆಗೆ ರೋಮನ್ನರು ಏಸುವನ್ನು ಶಿಲುಬೆಗೇರಿಸಿದರು.

ಅದಾದ ಮೇಲೆ, ಅಲ್ಲಿಯೇ ಪಕ್ಕದ ಅರೇಬಿಯಾದಲ್ಲಿದ್ದ ಮಹಮದ್, ಜೆರೂಸಲೇಂಗೆ ಬಂದು ಯೆಹೂದ್ಯರ ಹತ್ತಿರ ಪಾಠ ಕಲಿತ. ಅವರಿಂದ ಅವನು ಅಲ್ಲಾ ಒಬ್ಬನೇ ದೇವನೆಂದ ಅರಿತು ಅದನ್ನು ಸಾರಬೇಕೆಂದು ಮತ್ತೆ ಅರೇಬಿಯಾಗೆ ತೆರಳಿದ. ಅಂದಿನ ಅರಬ್ಬರು 330 ದೇವರುಗಳನ್ನು ಪೂಜಿಸುತ್ತಿದ್ದರು. ಅವರೆಲ್ಲರ ದೇವಾಲಯಗಳು ಅಲ್ಲಿದ್ದವು. ಮಹಮದ್ ತಾನು ದೇವರ ಕಟ್ಟಕಡೆಯ ಪ್ರವಾದಿ. ಅಲ್ಲಾ ಒಬ್ಬನೇ ದಿಟವಾದ ದೇವರು, ಮಿಕ್ಕವರೆಲ್ಲ ಸುಳ್ಳು ಎಂದು ಹೇಳಿದಾಗ ಅಲ್ಲಿನ ಅರಬ್ಬರೆಲ್ಲ ಅವನನ್ನು ಅಲ್ಲಿಂದ ಓಡಿಸಿದರು.

ಕೆಲವು ವರ್ಷಗಳ ನಂತರ ಅವನು ಸೈನ್ಯವನ್ನು ಕಟ್ಟಿಕೊಂಡು ಬಂದು ಅರಬ್ಬರನ್ನೆಲ್ಲಾ ಸೋಲಿಸಿ ಮಿಕ್ಕ ದೇವಾಲಯಗಳನ್ನೆಲ್ಲಾ ಒಡೆದನು. ಸ್ವಲ್ಪ ವರ್ಷಗಳಾದ ಮೇಲೆ ಅವನು ಸೈನ್ಯವನ್ನು ಕಟ್ಟಿ ಜೆರೂಸಲೇಂಗೂ ಬಂದು ಅಲ್ಲಿ ಒಂದು ಮಸೀದಿ ಕಟ್ಟಿದ.

ಹೀಗಾಗಿ ಈ ದೇವರು ಮಾತು ಕೊಟ್ಟ ನೆಲ, ಅಂದಿನಿಂದಲೂ ಹೊಡೆದಾಟ – ಬಡಿದಾಟಗಳ ನೆಲವಾಗಿದೆ. ಈವರೆಗೂ ಯಾರೂ ಕಟ್ಟ ಕಡೆಯ ದೇವರ ಪ್ರವಾದಿ ಎನ್ನುವುದು ನಿರ್ಧಾರವಾಗಿಲ್ಲ.

ಮೊದಲು ಯುರೋಪಿಗೆ ಓಡಿ ಹೋಗಿದ್ದ ಯೆಹೂದಿಗಳು, ಹಿಟ್ಲರ್‌ನ ಹಿಂಸೆಯಿಂದ ನೊಂದಿರುವಾಗ, ಬ್ರಿಟಿಷರು ಅವರನ್ನು ಇಲ್ಲಿಗೆ ಮತ್ತೆ ತಂದು ನೆಲೆಸಿದರು. ಮತ್ತೆ ಮೊದಲಾಯಿತು ಅಲ್ಲಿಯೇ ಇದ್ದ ಅರಬ್ಬರಿಗೂ, ಯೆಹೂದಿಗಳಿಗೂ ಹೊಡೆದಾಟ. ಇದು ಮುಗಿಯದ ಹೋರಾಟ

ದೇವರು ಮಾತು ಕೊಟ್ಟಿದ್ದು ಇಷ್ಟೇ.



# PUZZLES & TEASERS

## I. FUNNY RIDDLES

1. What has lots of eyes, but can't see?
2. Where does one wall meet the other wall?
3. What kind of coat is best put on wet?
4. What would you find in the middle of Toronto?
5. What is so fragile that saying its name breaks it?
6. What can fill a room but takes up no space?
7. The more you take, the more you leave behind. What are they?
8. The more you take, the more you leave behind. What are they?
9. People make me, save me, change me, raise me. What am I?
10. What five-letter word becomes shorter when you add two letters to it?

## II. REBUS PUZZLES

A





B




## III. SOLVE PUZZLE


A




B




C




## PUZZLES & TEASERS ANSWERS

I. FUNNY RIDDLES:1). A Needle, 2). A Christmas Tree, 3). A Clock, 4). A Table , 5). A Cold, 6). A Rubber Band, 7). A Comb, 8). A Deck of Cards, 9). A Book. 10). A Fence.

II. Rebus Puzzles: A: 1.Shake a leg, 2. Hot under the collar, 3. Sweet tooth, 4. An old hand, 5. A bone to pick 6.To be in a pickle, 7.Fingers crossed, 8.See eye to eye, 9. Backburner, 10. Sixth sense, 11. Breaking point 12.On second thought

B: 1. Word of mouth, 2. A chain of events, 3. Sleep on it, 4. Jockey for position, 5. Hit the hay, 6. All in a days work 7. Door to door, 8. Draw blood, 9. A flash in the pan, 10. A barrel of laughs, 11. Two ships passing in the night,12. Safe and sound.

III. SOLVE PUZZLE: 1). Virat Kholi, 2). Surya Kumar Yadav, 3). KKR, 4). Sachin Tendulkar, 5). Ahmedabad.

IV. IDENTIFY THE LOGOS OF POPULAR BRANDS: A) HYUNDAI, B) HALDIRAM'S, C) HONDA, D) HAWKINS.

*Compiled by: Mr Ananth Banwas*

# ಕನ್ನಡ ನಾಡಿನ ಪಾರಂಪರಿಕ ತಿಂಡಿ-ತಿನಿಸುಗಳ ಮೇಳ

2025 ಜೂನ್ 15 ರವಿವಾರ ಸಂಜೆ ಜೋರಾದ ಮಳೆಯ ಭರದಲ್ಲೂ ಅಸೋಸಿಯೇಷನ್ನಿನಲ್ಲಿ ಎಲ್ಲಾ ಕನ್ನಡ ಜನರ ಸಡಗರ ಹಾಗೂ ಕಲರವ ಹಾಡಿತ್ತು.





ಈ ಸಂಸ್ಥೆ ತನ್ನ 100ರ ನಲಿವಿನ ಸಂದರ್ಭದಲ್ಲಿ ಇಟ್ಟುಕೊಂಡತಹ ಕಾರ್ಯ ಕ್ರಮದಲ್ಲಿ "ಕರ್ನಾಟಕ ಪಾರಂಪರಿಕ ತಿಂಡಿ-ತಿನಿಸುಗಳ ಮೇಳವೂ ಒಂದು. ಈ ಮೇಳ (ಜಾತ್ರೆ) ಎಲ್ಲಾ ವಿಧ'ದಲ್ಲೂ ಮೇಳದ ಅನುಭವವನ್ನೇ ಕೊಡುತ್ತಿತ್ತು.

ಇದರಲ್ಲಿ 90 ವರ್ಷದ ಹಿರಿಯ ಅನುಭವಿಗಳಿಂದ ಹಿಡಿದು 16 ವರ್ಷದ ಮಕ್ಕಳ ತಿಂಡಿಗಳೂ ಸೇರಿದ್ದವು. ಅದೂ ಅಲ್ಲದೇ ಹೆಂಗಸರಿಗಿಂತಾ ತಾವೇನು ಕಮ್ಮಿನೇ? ಎಂದು ತಮ್ಮ ನೆಚ್ಚಿನ ತಿಂಡಿಯನ್ನು ಮಾಡಿಕೊಂಡು ತಂದ ಗಂಡಸರೂ ಇದರಲ್ಲಿ ಇದ್ದರು. ಅದೂ ಅಲ್ಲದೇ ಹೆಂಡತಿಗೆ ಅಡಿಗೆ ಕೆಲಸದಲ್ಲಿ ತಾವೆಷ್ಟು ಸಹಾಯ ಮಾಡಿದ್ದೀವಿ ಅಂತಾ ತಮ್ಮನ್ನು ತಾವೇ ಹೊಗಳಿಕೊಳ್ಳುವ ಹೊಗಳು ಭಟ್ಟರೂ ಇದರಲ್ಲಿ ಸೇರಿದ್ದರು.









ರವಿವಾರ ಸಂಜೆ 4ಕ್ಕೆ "ಕರ್ನಾಟಕ ಪಾರಂಪರಿಕ ತಿಂಡಿ ತಿನಿಸುಗಳ ಮೇಳಕ್ಕೆ ಭಾಗವಹಿಸಿದ ಎಲ್ಲಾ ಸದಸ್ಯರುಗಳು ತಮ್ಮ ತಮ್ಮ ಮನೆಯಿಂದಲೇ ಸಿಹಿತಿಂಡಿ ಹಾಗೂ ಖಾರ ತಿಂಡಿಗಳನ್ನು ಮಾಡಿ ತಂದಿದ್ದರು. ಅವರೆಲ್ಲರೂ ತಂದಿರುವ





ತಿಂಡಿಯನ್ನು ನಮ್ಮ ಗಣೇಶನಿಗೆ ನೈವೇದ್ಯ ಮಾಡಿದರು.


ಸರಿಸುಮಾರು 4.30ಕ್ಕೆ ನಿರ್ಣಾಯಕರು ನಿರ್ಣಯ ತೆಗೆದುಕೊಳ್ಳುವುದಕ್ಕೆ ಸಜ್ಜಾಗುತ್ತಿದ್ದರು.

ಮೊದಲನೇ ನಿರ್ಣಾಯಕರಾಗಿ ಶ್ರೀಮತಿ ಶಾಲಿನಿ ರಾವ್, ಎರಡನೆಯ ನಿರ್ಣಾಯಕರಾಗಿ ಶ್ರೀಮತಿ ಸ್ನೇಹಾ ಶರದ್ ನರಗುಂದಕರ್, ಮೂರನೆಯ ನಿರ್ಣಾಯಕರಾಗಿ ಶ್ರೀಮತಿ ಸುಧಾ ಶ್ರೀನಿವಾಸ್ ಸೇರಿದ್ದರು. ಇವರೆಲ್ಲರೂ ಬರೇ ಮುಂಬಯಿಯವರಾಗಿರದೇ ಕರ್ನಾಟಕದ ಬೇರೆ ಬೇರೆ ಪ್ರಾಂತ್ಯಗಳಾದ

ಮಂಗಳೂರು, ಧಾರವಾಡ ಹಾಗೂ ಬೆಂಗಳೂರಿನವರಾಗಿದ್ದರು.

ಸರಿಸುಮಾರು 47 ಜನರು ಮಾಡಿಕೊಂಡು ತಂದ ತಿಂಡಿಯನ್ನು ತಿಂದು ಸರಿಯಾದ ನಿರ್ಣಯವನ್ನು ತೆಗೆದುಕೊಳ್ಳುವುದು ಅಷ್ಟೊಂದು ಸುಲಭವಲ್ಲಾ ಎಂದು ಅವರಿಗೆಲ್ಲಾ ಮೊದಲೇ ತಿಳಿದಿತ್ತು. ಎಲ್ಲ ತಿಂಡಿಗಳು ಎಷ್ಟು ಆರೋಗ್ಯಕರವಾಗಿದೆ? ಅದು ಹಗುರ ಇದೆಯೋ ಇಲ್ಲವೋ ಬೆಂದಿದೆಯೋ ಇಲ್ಲವೋ, ಅದರ ರುಚಿ ಹೇಗಿದೆ? ಎಂದು ತಿಳಿದು ಅವರೆಲ್ಲರಿಗೂ ಅಂಕಗಳನ್ನು ಕೊಡುವುದಕ್ಕೆ ಸುಮಾರು ಎರಡು ಘಂಟೆಗಳ ಕಾಲ ನಿರ್ಣಾಯಕರು ನಿರ್ಣಯ ತೆಗೆದುಕೊಳ್ಳುವುದಕ್ಕೆ ಬೇಕಾಯಿತು. ಭಾಗವಹಿಸಿದ ಎಲ್ಲರೂ ತಾವು ತಂದ ತಿಂಡಿಯನ್ನು ಒಪ್ಪ ಓರಣವಾಗಿ ಇರಿಸುತ್ತಿದ್ದರು.





















★ ಪದ್ಮಿನಿ ಪಂಡಿತ್‌ರವರ ಕಜ್ಜಾಯ ಮಧ್ಯಾಹ್ನ 2.30ರ ಹೊತ್ತಿಗೆ ಅಸೋಸಿಯೇಷನ್ನಿನ ಬಾಗಿಲು ತಲುಪಿತ್ತು.

★ ನಮ್ಮೆಲ್ಲರ ಪ್ರೀತಿಯ ಡಾನ್ಸ್ ಟೀಚರ್ ಆದ ಶ್ರೀಮತಿ ಗಿರಿಜಾರವರು ಅಮ್ಮ ಮಾಡಿಕೊಟ್ಟ ಹಲಸಿನ ಧೋಲೆಯನ್ನು ತಂದಿದ್ದರು.

★ ಉದ್ದಿನ ಮುದ್ದೆ ಎಂಬ ಹಳೆಯ ಕಾಲದ ತಿಂಡಿಯನ್ನು ನಾಗರತ್ನ ಮಾಸ್ಕೇರಿಯವರು ತಂದಿದ್ದರು.

★ ನಮ್ಮ ಲೀಲಾ ಬನವಾಸಿಯವರ ತಿಂಡಿಗೆ ಮಾರು ಹೋಗದವರೇ ಇಲ್ಲ. ಅವರ ಗಸೆಗಸೆ ಪಾಯಸ ಅಂತೂ ರುಚಿಯಿಂದ ಕೂಡಿತ್ತು.

★ ಶ್ಯಾಮಲಾ ಪ್ರವೀಣರವರ ಮದ್ದೂರ ವಡ ಹಾಗೂ ಶೈಲಜಾ ವೆಂಕಟೇಶರವರ ಸಜ್ಜಪ್ಪಾ ಮಳೆಯ ವಾತಾವರಣಕ್ಕೆ ಸರಿಯಾದ ತಿಂಡಿ ಎನಿಸಿತ್ತು.

★ ರೋಹಿಣಿ ರಾಜೇಂದ್ರ ಅವರು ಬೆಂಗಳೂರಿನ ಫಿಲ್ಟರ್ ಕಾಫಿ ಜೊತೆಗೆ ತಾವು ಮಾಡಿದ ನುಚ್ಚಿನುಂಡೆಯನ್ನು ತುಂಬಾನೇ ಸುಂದರವಾಗಿ ಇರಿಸಿದರು.

★ ನಮ್ಮ ಸರಸ್ವತಿ ಶಿವಕುಮಾರ್‌ರವರು ತುಂಬಾನೇ ತರಕಾರಿಯನ್ನು ಹಾಕಿ ಬಿಸಿ ಬಿಸಿಯಾದ ಖಾರಬಾತ್ (ಉಪ್ಪಿಟ್ಟು) ನ್ನು ಮಾಡಿ ತಂದಿದ್ದರು.























★ ಅನಂತ ಜೋಶಿಯವರ ಪತ್ನಿ ಸಜ್ಜಿಗೆ ಹಾಗೂ ಶಾವಿಗೆ ಉಪ್ಪಿಟ್ಟು ತಂದಿದ್ದರು.

★ ಪುಷ್ಪಾ ಪೂಜಾರಿಯುವರು ಹಾಲುಂಡೆ ಯನ್ನು ತಂದಿದರು.

★ ಯಶಸ್ವಿನಿ ಅವರು ಖೆಡ್ಡ ಅಕ್ಕಿ ಹುಡಿಯನ್ನು ಅವರ ಮಕ್ಕಳಾದ ಚಿತ್ರ ಹಾಗೂ ಹರ್ಷಿಕಾ ಖಾರ ಅವಲಕ್ಕಿ ಯನ್ನು ತುಂಬಾ ಚೆನ್ನಾಗಿ ಮಾಡಿ ತಂದಿದ್ದೇವೆ ಎಂದು ಹೇಳುತ್ತಲೇ ಇದ್ದರು.

★ ಪೂರ್ಣಿಮಾ ಸುರೇಶರವರು ಸಾಗರದಿಂದಲೇ ಹಲಸಿನ ಹಣ್ಣನ್ನು ತಂದು ಹಲಸಿನ ಹಣ್ಣಿನ ಸುಟ್ಟವ್ಪೂ (ಬಜೆ) ಅನ್ನು ನಮ್ಮೆದುರು ಇರಿಸಿದ್ದರು.

★ ಪದ್ಮಾ ಹಾಗೂ ರವಿ ಇಬ್ಬರೂ ಸೇರಿ ರಾಗಿ ಹಾಲುಬಾಯಿ ಮಾಡಿ ತಂದಿದ್ದರು.

★ ಮಂಜುಳಾ ಎಂ. ಕೆ. ಅವರು ತಂದ ಬಿಸಿ ಬೇಳೆ ಬಾತ್ ತುಂಬಾನೇ ಪರಿಮಳದಿಂದ ಕೂಡಿತ್ತು.

★ ಲತಾ ಉಪಾಧ್ಯಾಯರವರ ನವಣೆ ಹಾಗೂ Dry Fruit Mix ಹಾಲುಬಾಯ್ ಬಾಯಿಯಲ್ಲಿ ನೀರು ತಂದಿತ್ತು.

★ ಗಾಯತ್ರಿ ರಂಗನಾಥ್ ಅವರ ಗೊಜ್ಜವಲಕ್ಕಿ ಜೊತೆ ಲತಾ ರಂಗನಾಥ್‌ರವರು ಮನೆಯಲ್ಲೇ
























ಮಾಡಿದಂತಹ Banana Chip ಬಹಳವೇ ಚೆನ್ನಾಗಿತ್ತು.

★ ಸುಶೀಲಾ ರಾಮಣ್ಣರವರು ಮಾಡಿದ ಖಾರದ ಕಡುಬನ್ನು ತುಂಬಾನೇ ಖುಷಿಪಟ್ಟು ಎಲ್ಲರೂ ತಿನ್ನುತ್ತಿದ್ದರು. ಮಹತಿಯ ಬೆಲ್ಲದ ಕಡುಬು ಚೆನ್ನಾಗಿತ್ತು.

★ ನಮ್ಮ ಶಶಿಕಲಾ ಪಾರ್ಥಸಾರಥಿಯವರು ಅಸಲಿ ಅಯ್ಯಂಗಾರ್ ಪುಳಿಯೊಗರೆಯ ಸ್ವಾದವನ್ನು ನಮ್ಮ ನಾಲಿಗೆಯಲ್ಲಿ ಇರಿಸಿದರು.

★ ವೀಣಾ ಕೃಷ್ಣಮೂರ್ತಿಯವರು ಬೇಗ ಆಗುವ ಹಾಗೂ ಸುಲಭವಾಗಿ ಮಾಡ ಬಹುದಾದ ಕರ್ನಾಟಕದ ಹುಳಿ ಅವಲಕ್ಕಿ ಅಥವಾ ಗೊಜ್ಜವಲಕ್ಕಿಯನ್ನು ತಂದಿದ್ದರು.

★ ಸರೋಜ ಪರಾಂದೆಯವರು ಹಬ್ಬ ಹರಿದಿನಗಳಲ್ಲಿ ಉಪವಾಸಕ್ಕೆ ಅಂತಾನೇ ಮಾಡುವ ತಂಬಿಟ್ಟನ್ನು ಮಾಡಿ ತಂದಿದ್ದರು.

★ ರೋಹಿಣಿ ಜರೆಯವರು ಪ್ರೀಮಿಯಂ ತಿಂಡಿ ಎಂದೇ ಹೆಸರಾದ ಬರೀ ವಿಶೇಷ ಸಂದರ್ಭಗಳಲ್ಲಿ ಮಾಡುವಂಥ ಚಿರೋಟಿ ಎಂಬ ಸಿಹಿ ತಿಂಡಿಯನ್ನು ನಮ್ಮೊಂದಿಗೆ ಹಂಚಿ ಕೊಂಡರು.

★ ಭೀಮರಾಯ ಉತ್ತರ ಕರ್ನಾಟಕದ ಸಾಂಪ್ರದಾಯಿಕ ಸಿಹಿಯಲ್ಲಿ ಒಂದಾದ ಗೋಧಿ ಹುಗ್ಗಿಯನ್ನು ತಮ್ಮ ಮಗಳ ಜೊತೆಗೆ ತಂದಿದ್ದರು.

★ ಅನಸೂಯರವರು ತಂದ ಹುಳಿ ಅನ್ನ ತುಂಬಾನೇ ರುಚಿಯಾಗಿತ್ತು. ಅವರು ಅದನ್ನು ಅಲಂಕರಿಸಿ ಇಟ್ಟ ರೀತಿ ತುಂಬಾ ಸುಂದರ ವಾಗಿತ್ತು.

★ ಸುಶೀಲಾ ದೇವಾಡಿಗರ ತಂಬಿಟ್ಟಿನ ಉಂಡೆ ತುಂಬಾ ರುಚಿಯಿಂದ ಕೂಡಿತ್ತು.

★ ಗೌರಿ ಮಧುಸೂದನ್‌ರವರ ಮಾವಿನ ಹಣ್ಣಿನ ಕೇಕ್‌ಗೆ ಎಲ್ಲರೂ ಮುಗಿಬಿದ್ದಿದ್ದರು.

★ ಚಂದ್ರಕಲಾ ಶಿಂಪಿಯವರ ಚಕ್ಕುಲಿ ತುಂಬಾನೇ ಹಗುರವಾಗಿತ್ತು. *(19ನೆಯ ಪುಟಕ್ಕೆ)*









# ಬಾವಿ



✍ ಉಮಾ ರಾವ್

*(ಕಳೆದ ಸಂಚಿಕೆಯಿಂದ...)*

**(ಉಮಾ ರಾವ್ ಕಥೆಗಳು)**

ಮಾಸಿದ ಹಸಿರು ಗೇಟು ತೆರೆದೇ ಇತ್ತು. ಗೇಟುಗಳನ್ನು ಹಿಡಿದು ನಿಲ್ಲಿಸಿದ್ದ ಗಾರೆ ತರಿದ ಕಂಬಗಳು. ಅವೆರಡನ್ನು ಮೇಲೆ ಸೇರಿಸಿದ್ದ ಆರ್ಚ್. ಮೊದಲು ಹಬ್ಬಿದ್ದ ಜಾಜಿ ಬಳ್ಳಿ ಒಣಗಿ ಕರಕಲಾಗಿತ್ತು. ಮನೆಯ ನಾಲ್ಕು ಮೆಟ್ಟಿಲು, ವೆರಾಂಡಾ. ತೆಗೆದೇ ಇದ್ದ ಬಾಗಿಲಿನಿಂದ ಕಾಣುತ್ತಿದ್ದ ಇನ್ನೂ ಚೆನ್ನಾಗೇ ಇದ್ದ ಕೆಂಪು ನೆಲ. ಮೇಲಿನ ಗಾಜು ಹಂಚಿನಿಂದ ಅದರ ಮೇಲೆ ಬಿದ್ದು ಕಣ್ಣು ಕೋರೈಸುವಂತೆ ಮಾಡುತ್ತಿದ್ದ ಒಂದು ಬಿಸಿಲು ಕೋಲು. ದಿನಾ ಎಷ್ಟೊಂದು ಸಲ, ಕಸ ಬಳಿದು, ಉಜ್ಜಿ, ಸಾರಿಸಿ ಹೊಳೆಯುವಂತೆ ಇಟ್ಟಿದ್ದ ಕೆಂಪು ನೆಲ. ಐವತ್ತು ವರ್ಷಗಳು ನಡೆದಾಡಿದವರ ಹೆಜ್ಜೆ ಗುರುತುಗಳು, ಪುಟ್ಟ ಪುಟ್ಟಗೆಜ್ಜೆ ಕಾಲಿನಲ್ಲಿ ಅಂಬೆಗಾಲಿಡುತ್ತಿದ್ದ ವಿನೀತನ ಬಾಯಿಂದ ಸುರಿದ ಜೊಲ್ಲು, ಸತ್ಯನಾರಾಯಣ ಪೂಜೆಯ ದಿನ ತುಂಬಿದ ಅರಿಶಿನ ಕುಂಕುಮ ಹೂವು ತುಳಸಿ ಪ್ರಸಾದ ಹಣ್ಣುಗಳ ಪರಿಮಳ, ಮಂತ್ರ ಘೋಷದ ನಾದ. ಗೋಡೆ ಪೂಜೆ ಮಾಡುತ್ತಿದ್ದ ಭ್ರಮಿತ ತಾತನ ಹತಾಶೆಯ ಉಸಿರು, ಶೀಲ ಹಾಕಿದ್ದ ಚೆಂದದ ಕಸೂತಿಯ ಕುಶನ್ ಕವರುಗಳ ನೋಡಿ, ಅಲ್ಲಿ ಇಲ್ಲಿ ಬಿದ್ದಿದ್ದ ಆಟದ ಸಾಮಾನುಗಳು, ಮನೆಗೆ ಬಂದವರು ಕಾಫಿ ಕುಡಿದಿಟ್ಟ ಲೋಟಗಳು, ಅಮ್ಮ, ಶೀಲಾ, ಅಜ್ಜಿ... ಎಲ್ಲರ ಬಳೆ ಸದ್ದು. ಮಾತಿನ ಕಲರವ. ಮಕ್ಕಳ ಜಗಳ, ಕೂಗಾಟ. ಪೀಪಿ ಗಲಾಟೆ. ಒಂದೇ, ಎರಡೇ. ಅಷ್ಟೆಲ್ಲವನ್ನೂ ತನ್ನ ನೆನಪಿನಲ್ಲಿ ಕರಗಿಸಿಕೊಂಡು ಏನೂ ತಿಳಿಯದಂತೆ ಮೊದಲಿನಂತೆಯೇ ಹೊಳೆಯುತ್ತಿತ್ತು ಆ ಹಾಲಿನ ಕೆಂಪು ನೆಲ.

ಹೊರಗೆ ನಿಂತು ನೋಡಿದಾಗ ಒಂದರ ಹಿಂದೊಂದು ಎಲ್ಲಾ ಬಾಗಿಲುಗಳೂ ತೆರೆದಿದ್ದುವು. ಹಾಲಿನಲ್ಲಿ ಮಿರುಗುಟ್ಟುತ್ತಿದ್ದ ಕೆಂಪು ನೆಲ. ಮಧ್ಯೆ ಬೆಳಕು ಚೆಲ್ಲಿದ್ದ ಬಿಸಿಲು ಕೋಲು. ಅದರ ಪ್ರಖರತೆಯಲ್ಲಿ ನಡುಮನೆಯಲ್ಲಿ ನೆರಳುಗಳಂತೆ ಓಡಾಡುತ್ತಿದ್ದ ಒಂದಷ್ಟು ದಿನ. ಯಾರ ಮುಖವೂ ಕಾಣದು. ಅವರೆಲ್ಲಾ ಯಾರು? ಅದರ ತೆರೆದ ಬಾಗಿಲಿನ ಹಿಂದೆ ವಿಶಾಲವಾದ ಹಿತ್ತಿಲು, ಅದರ ಮಧ್ಯ ನಿಶ್ಚಲವಾಗಿ ನಿಂತಿದ್ದ ಬಾವಿ. ಅದೇ ಬಾವಿ. ಅಮೆರಿಕಾದಲ್ಲಿ ಟಿವಿ ತೆರೆಯ ಮೇಲೆ ಕಂಡು ತನಗೆ ಅಷ್ಟೊಂದು ಕಾಡಿದ್ದ ಬಾವಿ. ಅದನ್ನು ದಿಟ್ಟಿಸುತ್ತಲೇ ರಾಮನಾಥ ಅಲ್ಲೇ ನಿಂತರು.

ತಾನು ಆ ಪೆಟ್ಟಿಗೆ ಬೇಗ ತೆಗೆದುಕೊಂಡು ಹೊರಟು ಬಿಡಬೇಕು. ಸಾಧ್ಯವಾದರೆ ಇವತ್ತೇ. ತನ್ನ ಹೃದಯಕ್ಕೆ ಹತ್ತಿರಾದ ಏನೇನೆಲ್ಲಾ ಇತ್ತು ಅದರಲ್ಲಿ ಮೂರು ತಲೆಮಾರಿನ, ಮಾಸಿದ ಕಂದು ಬಣ್ಣದ ಫೋಟೊಗಳು. ಕಟ್ಟು ಹಾಕಿದ ಅವುಗಳೊಳಗೆ ಮದುವೆಗಳು, ಮುಂಜಿಗಳು, ನಾಮಕರಣಗಳು, ಷಷ್ಠಿಪೂರ್ತಿಗಳಿಗೆ ಬಂದಿದ್ದ ನೆಂಟರು. ಎಷ್ಟು ನಂಟಿತ್ತು ಆಗ. ಅಜ್ಜಿ ಮಾಡಿದ್ದ ಸ್ಯಾಟಿನ್ ರಿಬ್ಬನ್ ಕಸೂತಿಗೆ ಕಟ್ಟು ಹಾಕಿಸಿಟ್ಟ ಕಲಾಕೃತಿಗಳು.

ತಮ್ಮ ಊರಿಗೆ ವಿದ್ಯುತ್ ಬರುವ ಮೊದಲು ಪ್ರತಿ ಸಂಜೆ ಹಚ್ಚುತ್ತಿದ್ದ ಹಿತ್ತಾಳೆ ದೀಪದ ಕಂಬಗಳು. ಅಸಲಿ ಚಿನ್ನದ ಕುಸುರಿ ಕೆಲಸ ಮಾಡಿಸಿ ತಂಜಾವೂರಿನಿಂದಲೇ ತರಿಸಿದ್ದ ಬೆಣ್ಣೆ ಕೃಷ್ಣನ ಚಿತ್ರ. ಹಳೆ ಗ್ರಾಮಫೋನ್ ರೆಕಾರ್ಡುಗಳು. ಇಂದಿಗೂ ಅದರಿಂದ ಹೊರಗೆ ಹರಿಯಲು ಸಿದ್ಧವಿದ್ದ "ನಳ ದಮಯಂತಿ," "ಶಾಕುಂತಲಾ" ನಾಟಕಗಳು. ಜೊತೆಗೆ ನಗುವ ರೆಕಾರ್ಡ್, ಚೌಡಯ್ಯನವರ ಪಿಟೀಲು, ಅಜ್ಜಿಯ ಪ್ರೀತಿಯ ಸೈಗಲ್ ಹಾಡುಗಳು. ತನ್ನ ಟೆನಿಸ್ ರಾಕೆಟ್. ತಮ್ಮ ಮದುವೆ ಆಲ್ಬಮ್. ದಂತದ ರಾಜ, ರಾಣಿ, ಕಾಲಾಳುಗಳ ಚದುರಂಗ. ಅಮ್ಮ ಬದುಕಿರುವವರೆಗೂ ತಲೆ ಹತ್ತಿರ ಇದ್ದ ಅವಳು ಕಳೆದುಕೊಂಡ 3 ತಿಂಗಳ ಮಗುವಿನ ಫೋಟೋ. ತಾತ ಸ್ವಾತಂತ್ರ್ಯ ಹೋರಾಟದಲ್ಲಿ ನೂಲುತ್ತಿದ್ದ ತಕಲಿ. ಅಜ್ಜಿಯ ದಪ್ಪ, ಮೆತ್ತನೆಯ ಖಾದಿ ಸೀರೆಗಳು. ಊರಿಗೆ ಬಂದಿದ್ದ ವಿನೋಬಾ ಭಾವೆ, ಗೋಲ್‌ವಾಲ್ಕರ್, ಮಿರ್ಜಾ ಇಸ್ಮೇಲರ ಫೋಟೊಗಳು. ತಮ್ಮ ಮನೆಯ ಮುಂದೆ ನಿಂತಿದ್ದ 1939ರ ಮಾಡೆಲ್ ಮಾರಿಸ್ ಕಾರು. ಅದರ ಪಕ್ಕ ಅಪ್ಪ ಅಮ್ಮನೊಡನೆ ಅಜ್ಜಿಯ ತೋಳಿನಲ್ಲಿ ತಾನು. ಬಾವಿ ಕಟ್ಟೆ ಪಕ್ಕದಲ್ಲಿ ನಾಚುತ್ತಾ ನಿಂತಿರುವ ಅಮ್ಮ ಏಳು ತಿಂಗಳ ಬಸುರಿ, ಅಂದು ಅವಳಿಗೆ ಬಳೆ ತೊಡಿಸುವ ಸಂಭ್ರಮ. ಇಷ್ಟೊಂದು ನೆನಪುಗಳನ್ನು ಹೊತ್ತ ಆ ಪೆಟ್ಟಿಗೆ ಇನ್ನು ಇಲ್ಲಿ ಇರಬಾರದು. ಅವರಿಗೆ ಕಣ್ಣು ತುಂಬಿ ಬಂತು.

ಹೊರಗೇ ನಿಂತು ಮನೆಯೊಳಗಿದ್ದ ಜಗತ್ತನ್ನು ಮತ್ತೆ ಸೃಷ್ಟಿಸುತ್ತಿದ್ದ ರಾಮನಾಥ ಮೆಟ್ಟಿಲುಗಳನ್ನು ಒಂದೊಂದಾಗಿ ಹತ್ತಿ ಕಾಲಿಟ್ಟಾಗ. ಅಲ್ಲಿ ಓಡಾಡುತ್ತಿದ್ದ ನೆರಳುಗಳ ಮುಖಸಷ್ಟವಾಗಿ, ಸುತ್ತಲಿದ್ದ ಲೈಟುಗಳು, ಕ್ಯಾಮರಾ ಮಾನಿಟರ್‌ಗಳೂ, ಎಲ್ಲೆಲ್ಲೂ ಹರಡಿದ ವಯರುಗಳು, ಬಣ್ಣ ಹಚ್ಚಿಕೊಂಡು ಮೂಲೆಯಲ್ಲಿ ನಿಂತು ಮೊಬೈಲ್‌ನಲ್ಲಿ ಏನೋ ನೋಡುತ್ತಾ ಕಿಲಕಿಲ ನಗುತ್ತಿದ್ದ ಇಬ್ಬರು ಹುಡುಗಿಯರು ಎಲ್ಲಾ ಕಂಡು ಬಂದರು. ಬೆಳಕಿನಿಂದ ಒಳಗೆ ಬಂದು ದೃಷ್ಟಿ ಮತ್ತಷ್ಟು ಹೊಂದಿಸಿಕೊಂಡು ಸುತ್ತಲೂ ನೋಡಿದರು. ಎದುರಿಗೆ ಬಾಗಿಲ ಮೇಲೆ ರಾರಾಜಿಸುತ್ತಿದ್ದ ಅಜ್ಜಿ ತಾತನ ಫೋಟೊ ನೋಡಿ ಅವರಿಗೆ ಎದೆ ಧಸಕ್ಕೆಂದಿತು. ಇದೇನು ಎಲ್ಲಾ ಖಾಲಿ ಮಾಡಿ ಹೊರಟಿದ್ದವಲ್ಲಾ. ಸುತ್ತಲೂ ತಿರುಗಿ ನೋಡಿದರೆ

ಇನ್ನೂ ದೊಡ್ಡ ಶಾಕ್ ಕಾದಿತ್ತು. ಗೋಡೆಯ ತುಂಬಾ ತಮ್ಮ ಟ್ರಂಕಿನಲ್ಲಿದೆ ಪೂರ್ವಜರ ಚಿತ್ರಗಳು. ಎಲ್ಲಿಂದಲೋ ಬಾಡಿಗೆಗೆ ತಂದಿದ್ದ ಹಳೇ ಕಾಲದ ಕರಿಮರದ ಕುರ್ಚಿ ಮೇಜುಗಳ ಪಕ್ಕ ತಮ್ಮ ಪುರಾತನ ದೀಪದ ಕಂಬ. ಮೂಲೆಯ ಟೇಬಲ್ಲಿನ ಮೇಲೆ ಕಾಣುವಂತೆ ನಳ ದಮಯಂತಿ ರೆಕಾರ್ಡುಗಳು. ಟೀಪಾಯ್ ಮೇಲೆ ದಂತದ ಚದುರಂಗ, ಅಲ್ಲೇ ನೆಲದ ಮೇಲೆ ಬಿದ್ದು ಗಾಜು ಸೀಳಿದ್ದ ಫೋಟೋ. ಕೈಯ್ಯಲ್ಲೆತ್ತಿಕೊಂಡು ಬೆಳಕಿಗೆ ಹಿಡಿದು ನೋಡಿದಾಗ ಅದರೊಳಗೆ ನಾಚುತ್ತಾ ನಿಂತಿದ್ದ 7 ತಿಂಗಳ ಬಸುರಿ ಅಮ್ಮ.

ರಾಮನಾಥರ ಮೈ ಉರಿಯ ತೊಡಗಿತು. ತಲೆ ಸುತ್ತುತ್ತಿತ್ತು. ತನಗೆ ಏನಾಗುತ್ತಿದೆಯೆಂದೇ ತಿಳಿಯದಾಯಿತು. ನಡಗುತ್ತಿದ್ದ ಧ್ವನಿಯಲ್ಲಿ "ಏನಾಗ್ತಾ ಇದೆ ಇಲ್ಲಿ? ಹೇಳೋರು ಕೇಳೋರು ಯಾರೂ ಇಲ್ಲವೆ." ಎಂದು ಘರ್ಜಿಸಿದಾಗ ಒಳಗಿಂದ ಬಂದ ಡೈರೆಕ್ಟರ್ "ಸರ್. ಏನಾಯ್ತು... ನೀವು ಯಾರೋ ಗೊತ್ತಾಗಲಿಲ್ಲಾ..." ಎಂದು ತೊದಲತೊಡಗಿದ.

"ಇದು ನನ್ನ ಮನೆ. ಇದನ್ನೆಲ್ಲ ಹೀಗೆ ಅಲಂಕಾರಕ್ಕೆ ಇಟ್ಟವರು ಯಾರು? ನಿಮಗೆ ಪೆಟ್ಟಿಗೆ ಮುಟ್ಟಲು ಪರ್ಮಿಶನ್ ಕೊಟ್ಟವರು ಯಾರು?" ಎಂದಾಗ ಅವರ ಮೈ ನಡುಗುತ್ತಿತ್ತು. ಏನೂ ಅರ್ಥವಾಗದ ಡೈರೆಕ್ಟರ್ "ಒಂದು ನಿಮಿಷ ಸರ್," ಎಂದು ಮೊಬೈಲ್ ಎತ್ತಿಕೊಂಡು ಪಕ್ಕಕ್ಕೆ ಸರಿದು "ಇಲ್ಲಿ ಯಾರೊ ಬಂದು ಗಲಾಟೆ ಮಾಡ್ತಿದಾರೆ. ನಿಮ್ಮ ಪರ್ಮಿಷನ್ ತಕ್ಕೊಂಡಿದ್ವಲ್ಲಾ ಸರ್..." ಅಂತೆಲ್ಲಾ ಮಾತಾಡಿ "ಸರ್, ಓನರ್ ಬರ್ತಿದಾರೆ, ಸಮಾಧಾನ ಮಾಡ್ಕೊಳ್ಳಿ," ಎಂದು "ಒಂದು ಕೂಲ್ ಡ್ರಿಂಕ್ ತಗೊಂಬಾರೋ" ಎಂದು ಕೂಗಿ ಹಾಕಿದ.

****

ಅಲ್ಲಿ ನಿಂತಿರುವುದೇ ಹಿಂಸೆ ಎನ್ನಿಸಿ ರಾಮನಾಥರು ನಿಧಾನವಾಗಿ ನಡೆದು ಹಿತ್ತಲ ಕಡೆ ಬಂದರು. ಬಾವಿಯ ಪಕ್ಕ ಹಾಕಿದ್ದ ಎರಡು ಪ್ಲಾಸ್ಟಿಕ್ ಕುರ್ಚಿಗಳಲ್ಲಿ ಕೂತು, ಕೈಯಲ್ಲಿ ಸ್ಕ್ರಿಪ್ಟ್ ಹಿಡಿದು ಚರ್ಚೆ ಮಾಡುತ್ತಿದ್ದ ಇಬ್ಬರು ಯುವಕರು "ಬನ್ನಿ ಸಾರ್. ಕೂತ್ಕಳ್ಳಿ" ಎನ್ನುತ್ತಾ ಅಲ್ಲಿಂದ ಎದ್ದು ಹೋದರು. ಕರ್ಚೀಫಿನಿಂದ ಮುಖ ಒರೆಸಿಕೊಂಡು ಕೂತಾಗ ಹಾಲಲ್ಲಿ ಎತ್ತಿಕೊಂಡ, ಗಾಜು ಸೀಳಿದ ಬಸುರಿ ಅಮ್ಮನ ಫೋಟೋ ಇನ್ನೂ ಅವರ ಕೈಯ್ಯಲ್ಲೇ ಇತ್ತು. ಅದನ್ನು ಒಂದು ಸಾರಿ ಕೈಯ್ಯಲ್ಲೇ ಒರೆಸಿ ತೊಡೆಯ ಮೇಲಿಟ್ಟು ಕೊಂಡು ಕೂತುಕೊಂಡರು.

ಸ್ವಲ್ಪ ಹೊತ್ತಿನಲ್ಲೇ ಮೂರ್ತಿ ಅವಸರವಾಗಿ ಬರುತ್ತಿರುವುದು ಕಾಣಿಸಿತು. ಹಿತ್ತಲ ಮೆಟ್ಟಿಲು ಇಳಿಯುತ್ತಲೇ ಕೈ ಮುಂದೆ ಚಾಚಿ ಬಂದ ಅವರಿಗೆ ರಾಮನಾಥ ಕೈ ಕುಲುಕಲು ಮುಂದಾಗಲಿಲ್ಲ. ಪೆಚ್ಚಾದ ಮೂರ್ತಿ "ಯಾವಾಗ ಬಂದ್ಯೋ, ಏನೊ ಒಂದು ಫೋನಾದ್ರೂ ಮಾಡೋದಲ್ಲಾ ಊರಿಗೆ ಬರ್ತಿದೀನಿ ಅಂತ, ಇದೇನು ಹೀಗೆ ಧಿಡೀರ್ ಅಂತ!" ಎಂದು ನಗಲು ಪ್ರಯತ್ನಿಸಿದರು.

ರಾಮನಾಥ ಶೀತಲವಾಗಿ "ಹೇಳಿದ್ರೆ ಏನು ಮಾಡ್ತಿದ್ದೆ..." ಎಂದರು. ಅದರ ಅರ್ಥ ಗ್ರಹಿಸಿದ ಮೂರ್ತಿ "ಅದೂ... ಅದೂ..." ಎಂದು ತೊದಲಿದರು. "ನೋಡು, ಈಗಲೇ ಇಲ್ಲಿ ಇಟ್ಟಿರೋ ನನ್ನ ಸಾಮಾನೆಲ್ಲಾ ಟ್ರಂಕಿನಲ್ಲಿ ಪ್ಯಾಕ್ ಮಾಡಿಸು. ನಾನು ತಗೊಂಡು ಹೊರಡ್ತೇನೆ" ಎಂದರು ರಾಮನಾಥ, ಅವರ ಧ್ವನಿಯಲ್ಲಿ ಖಚಿತತೆ ಇತ್ತು.

ಹಿಂದೆ ಇದನ್ನೆಲ್ಲಾ ಕೇಳಿಸಿಕೊಳ್ಳುತ್ತಾ ನಿಂತಿದ್ದ ಡೈರೆಕ್ಟರ್ "ಸರ್, ಒಂದ್ನಿಮಿಷ" ಎಂದು ಮೂರ್ತಿಯವರನ್ನು ಸ್ವಲ್ಪ ದೂರ ಕರೆದುಕೊಂಡು ಹೋದ. ಮೊದಲು ಅಂಗಲಾಚಿಕೆಯಿಂದ ಶುರುವಾದ ಅವರ ಮಾತು, ಕೊನೆಗೆ ವಾಗ್ವಾದ, ಬೆದರಿಕೆವರೆಗೂ ತಲುಪಿತು. "ಇಷ್ಟೊಂದು ಸೀನ್ ಶೂಟ್ ಮಾಡಿಬಿಟ್ಟಿದ್ದೀವಲ್ಲಾ, ಮತ್ತೆ ಮಾಡೋದೂಂದ್ರೆ ಹೇಗೆ ಸಾಧ್ಯ. ಎಷ್ಟು ಲಾಸ್ ಆಗುತ್ತೆ. ಹಾಗೆ ಮಾಡಿದರೂ ಕಂಟಿನ್ಯುಯಿಟಿ ಗತಿ ಏನು... ಇಷ್ಟೆಲ್ಲಾ ಇದ್ದವರು ನಮಗೆ ಪರ್ಮಿಷನ್ ಕೊಡೋಕೆ ಮೊದಲು ಯೋಚಿಸಬೇಕಿತ್ತು... ಆ ಕಾಲದ ಆಮ್ಬಿಯನ್ಸ್ ಕ್ರಿಯೇಟ್ ಮಾಡೋದು ಸುಲಭಾನ... ಇಂಥಾ ಬೇಕಾರ್ ಅಜ್ಜ, ಅಜ್ಜಿ ಫೋಟೊಗಳು, ತಗಡು ಗ್ರಾಂಫೋನ್ ಪ್ಲೇಟ್‌ಗಳು, ತಾಮ್ರದ ಚೊಂಬು ಎಲ್ಲಾ ಸಿಗಬೇಕಾದ್ರೆ ಗುಜರಿಯಿಂದ ಗುಜರಿಗೆ ಅಲೀಬೇಕಷ್ಟೆ" ಎಲ್ಲಾ ಮಾತುಗಳನ್ನು ಕೇಳಿಸಿಕೊಳ್ಳುತ್ತಲೇ ಕೂತಿದ್ದ ರಾಮನಾಥರಿಗೆ ವಿಪರೀತ ಹಿಂಸೆಯಾಗಿ, ಅಲ್ಲಿ ಕೂಡುವುದೂ ಕಷ್ಟವಾಗತೊಡಗಿತು. "ನಂಗೆ ಲೇಟಾಗುತ್ತೆ. ಬೇಗ ಪ್ಯಾಕ್ ಮಾಡೋಕೆ ಹೇಳು" ಎಂದಾಗ ಮೂರ್ತಿ ಇತ್ತ ಬಂದರು. ಅವರಿಗೆ ಬೆನ್ನು ತಿರುಗಿಸಿ ಬಾವಿಯತ್ತ ನಡೆದ ರಾಮನಾಥ "ಆ ಹುಡುಗರಿಗೆ ಹೇಳಿ ಈ ಬಾವಿಯಿಂದ ಒಂದಿಷ್ಟು ತಣ್ಣನೆ ನೀರು ಸೇದಿಸಿಕೊಡು. ಕೊನೇ ಸಲ ಒಂದು ಲೋಟ ನಮ್ಮ ಬಾವಿ ನೀರು ಕುಡಿದು ಹೊರಡ್ತೀನಿ" ಎಂದವರೇ ಬಾವಿಯ ಹತ್ತಿರ ಬಂದು ಕಟ್ಟೆಗೆ ಒರಗಿ ಮೆಲ್ಲಗೆ ಬಗ್ಗಿ ನೋಡಿದರು. ಅವರ ಮನಃಪಟಲದಲ್ಲಿ ಹಿಂದೆಲ್ಲಾ ಬಗ್ಗಿದ ತಕ್ಷಣ ತಮ್ಮ ಪ್ರತಿಬಿಂಬವನ್ನು ಎಸೆಯುತ್ತಿದ್ದ ತಿಳಿಯಾದ ಸ್ತಬ್ಧವಾದ ನೀರಿನ ಚಿತ್ರ ಮೂಡಿತ್ತು.

ಆದರೆ ಅವರಿಗೆ ಅಲ್ಲಿ ಕಂಡದ್ದು ಕೇವಲ ಮೂರು ಅಡಿ ಕೆಳಗೆ ಗಾರೆ ಸಿಮೆಂಟಿನಿಂದ ಸೀಲ್ ಮಾಡಿದ್ದ ಬೂದು ಬಣ್ಣದ ತಳ. ಅದರ ಮೇಲೆ ಯಾರೋ ಕುಡಿದೆಸೆದಿದ್ದ ಮೂರ್ನಾಲ್ಕು ಖಾಲಿ ಕೋಕ್ ಕ್ಯಾನ್‌ಗಳು. ಅಷ್ಟೆ.

# ಮೈಸೂರಿನ ಮಹಾರಾಜರಾದ ಹೆಚ್ ಹೆಚ್ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಶ್ರದ್ಧಾಂಜಲಿ

ಮಹಾರಾಜ ಕೃಷ್ಣರಾಜ ಒಡೆಯರ್ IV (ನಾಲ್ವಡಿ ಕೃಷ್ಣರಾಜ ಒಡೆಯರ್; 4 ಜೂನ್ 1884 – 3 ಆಗಸ್ಟ್ 1940) 1894 ರಿಂದ 1940 ರಲ್ಲಿ ಅವರ ಮರಣದವರೆಗೆ ಮೈಸೂರು ರಾಜ್ಯದ ಇಪ್ಪತ್ತನಾಲ್ಕನೇ ಮಹಾರಾಜರಾಗಿದ್ದರು.

ಕೃಷ್ಣರಾಜ ಒಡೆಯರ್ IV ಜೂನ್ 4, 1884 ರಂದು ಮೈಸೂರು ಅರಮನೆಯಲ್ಲಿ ಜನಿಸಿದರು. ಅವರು ಮಹಾರಾಜ ಚಾಮರಾಜೇಂದ್ರ ಒಡೆಯರ್ X ಮತ್ತು ಮಹಾರಾಣಿ ವಾಣಿ ವಿಲಾಸ ಸನ್ನಿಧಾನ ಅವರ ಹಿರಿಯ ಮಗ. 1894 ರಲ್ಲಿ ಕಲ್ಕತ್ತಾದಲ್ಲಿ ಅವರ ತಂದೆಯ ಮರಣದ ನಂತರ, ಕೃಷ್ಣರಾಜ ಒಡೆಯರ್ ಅವರ ತಾಯಿ ಆಗಸ್ಟ್ 8, 1902 ರಂದು ಪ್ರೌಢಾವಸ್ಥೆಗೆ ಬರುವವರೆಗೂ ರಾಜ್ಯವನ್ನು ಆಳಿದರು.

ಮಹಾರಾಜರು ಪಿ. ರಾಘವೇಂದ್ರ ರಾವ್ ಅವರ ನಿರ್ದೇಶನದಲ್ಲಿ ಲೋಕರಂಜನ್ ಅರಮನೆಯಲ್ಲಿ ತಮ್ಮ ಆರಂಭಿಕ ಶಿಕ್ಷಣ ಮತ್ತು ತರಬೇತಿಯನ್ನು ಪಡೆದರು. ಪಾಶ್ಚಿಮಾತ್ಯ ಅಧ್ಯಯನಗಳ ಜೊತೆಗೆ, ಅವರಿಗೆ ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಶಿಕ್ಷಣ ನೀಡಲಾಯಿತು ಮತ್ತು ಕುದುರೆ ಸವಾರಿ ಮತ್ತು ಭಾರತೀಯ ಮತ್ತು ಪಾಶ್ಚಿಮಾತ್ಯ ಶಾಸ್ತ್ರೀಯ ಸಂಗೀತವನ್ನು ಕಲಿಸಲಾಯಿತು. ಅವರ ಆರಂಭಿಕ ಆಡಳಿತ ತರಬೇತಿಯನ್ನು ಬಾಂಬೆ ನಾಗರಿಕ ಸೇವೆಯ ಸರ್ ಸ್ಟುವರ್ಟ್ ಫ್ರೇಸರ್ ನೀಡಿದರು. ನ್ಯಾಯಶಾಸ್ತ್ರದ ತತ್ವಗಳು ಮತ್ತು ಕಂದಾಯ ಆಡಳಿತದ ವಿಧಾನಗಳ ಅಧ್ಯಯನವು ರಾಜ್ಯದ ವ್ಯಾಪಕ ಪ್ರವಾಸಗಳಿಂದ ಪೂರಕವಾಗಿತ್ತು, ಈ ಸಮಯದಲ್ಲಿ ಅವರು ನಂತರ ಆಳಬೇಕಾದ ದೇಶದ ಸ್ವರೂಪದ ಬಗ್ಗೆ ವ್ಯಾಪಕ ಜ್ಞಾನವನ್ನು ಪಡೆದರು. ಮಹಾರಾಜನಾಗಿ 39 ವರ್ಷಗಳ ಆಳ್ವಿಕೆಯಲ್ಲಿ, ಕೃಷ್ಣರಾಜ ಒಡೆಯರ್ IV ಈ ಕೆಳಗಿನ ದಿವಾನರನ್ನು (ಪ್ರಧಾನ ಮಂತ್ರಿಗಳು) ಹೊಂದಿದರು:

1. ಸರ್ ಪಿ. ಎನ್. ಕೃಷ್ಣಮೂರ್ತಿ (1901–06)
2. ಸರ್ ವಿ. ಪಿ. ಮಾಧವ ರಾವ್ (1906–09)
3. ಸರ್ ಟಿ. ಆನಂದ ರಾವ್ (1909–1912)
4. ಸರ್ ಎಂ. ವಿಶ್ವೇಶ್ವರಯ್ಯ (1912–19)
5. ಸರ್ ಎಂ. ಕಾಂತರಾಜ್ ಅರಸ್ (1919–22)
6. ಸರ್ ಅಲ್ಬಿಯನ್ ರಾಜ್‌ಕುಮಾರ್ ಬ್ಯಾನರ್ಜಿಮ್ ಐಸಿಎಸ್, (1922–26)
7. ಸರ್ ಮಿರ್ಜಾ ಇಸ್ಮಾಯಿಲ್ (1926–1941; ಕೃಷ್ಣ IV 1940ರಲ್ಲಿ ನಿಧನರಾದರು)

ಅವರ ಆಳ್ವಿಕೆಯಲ್ಲಿ ಅವರು ಬಡತನವನ್ನು ನಿವಾರಿಸಲು ಮತ್ತು ಗ್ರಾಮೀಣ ಪುನರ್ನಿರ್ಮಾಣ, ಸಾರ್ವಜನಿಕ ಆರೋಗ್ಯ, ಕೈಗಾರಿಕೆ ಮತ್ತು ಆರ್ಥಿಕ ಪುನರುತ್ಪಾದನೆ, ಶಿಕ್ಷಣ ಮತ್ತು ಲಲಿತಕಲೆಗಳನ್ನು ಸುಧಾರಿಸುವ ಕಡೆಗೆ ಕೆಲಸ ಮಾಡಿದರು.

ಇಂದಿನ ದೃಷ್ಟಿಕೋನದಲ್ಲಿ ಮಹಾರಾಜರು ನವೋದ್ಯಮ ಉದ್ಯಮಿಗಳಿಗೆ ಪರಿಪೂರ್ಣ ಮಾದರಿಯಾಗಿದ್ದರು:

ನಾವು ಒಟ್ಟುಗೂಡಿಸಿರುವ ಒಂದು ಸಣ್ಣ ಗೌರವ – ಟಿಪ್ಪಣಿ ಇಲ್ಲಿದೆ:

**ಸ್ಟಾರ್ಟ್‌ಅಪ್ ದೃಷ್ಟಿಕೋನದಲ್ಲಿ ಸಾಮ್ರಾಜ್ಯದ ನಾವೀನ್ಯತೆಗಳು:**

- ಮಿಂಟೋ ಕಣ್ಣಿನ ಆಸ್ಪತ್ರೆ – ಇದು ವಿಶ್ವದ ಅತ್ಯಂತ ಹಳೆಯ ಕಣ್ಣಿನ ಆಸ್ಪತ್ರೆ, ಇದನ್ನು 1903ರಲ್ಲಿ ಮಹಾರಾಜರ ಆಳ್ವಿಕೆಯಲ್ಲಿ ಸ್ಥಾಪಿಸಲಾಯಿತು.
- ಬೆಂಗಳೂರಿನಲ್ಲಿ ಬೀದಿ ದೀಪಗಳು – ಆಗಸ್ಟ್ 5, 1905ರಂದು, ಬೆಂಗಳೂರಿನಲ್ಲಿ ಬೀದಿ ದೀಪಗಳನ್ನು ಪರಿಚಯಿಸಲಾಯಿತು. ಇದು ಬೆಂಗಳೂರನ್ನು ಏಷ್ಯಾದ ಮೊದಲ ಬೀದಿ ದೀಪಗಳನ್ನು ಹೊಂದಿರುವ ನಗರವನ್ನಾಗಿ ಮಾಡಿತು.
- ದ್ವಿಸದಸ್ಯ ಸಭೆ – ಕೃಷ್ಣ ರಾಜ ಒಡೆಯರ್ IVರ ಮಾರ್ಗದರ್ಶನದಲ್ಲಿ, ಮೈಸೂರಿನ ಪ್ರತಿನಿಧಿ ಸಭೆಯನ್ನು ವಿಸ್ತರಿಸಲಾಯಿತು. 1907ರಲ್ಲಿ ಶಾಸಕಾಂಗ ಮಂಡಳಿಯನ್ನು ಸ್ಥಾಪಿಸುವುದರೊಂದಿಗೆ ಸಭೆಯು ದ್ವಿಸದಸ್ಯ ಸಭೆಯಾಯಿತು.
- ಮಹಿಳೆಯರ ಮತದಾನದ ಹಕ್ಕು – ಅಮೆರಿಕ ಮತ್ತು ಪ್ರಪಂಚದ ಇತರ ಭಾಗಗಳಲ್ಲಿ ಮಹಿಳೆಯರಿಗೆ ಮತದಾನದ ಹಕ್ಕು ನೀಡುವ ಬಹಳ ಹಿಂದೆಯೇ, ಮೈಸೂರಿನಲ್ಲಿ ಅವರಿಗೆ ಮತದಾನದ ಹಕ್ಕನ್ನು ನೀಡಲಾಯಿತು.

- ಚಿತ್ರದುರ್ಗದಲ್ಲಿರುವ ವಾಣಿ ವಿಲಾಸ ಸಾಗರ ಅಣೆಕಟ್ಟು – 1907ರಲ್ಲಿ ನಿರ್ಮಿಸಲಾದ ಈ ಅಣೆಕಟ್ಟು ಕರ್ನಾಟಕದ ಮೊದಲ ಅಣೆಕಟ್ಟು.
- ಮೈಸೂರು ಬಾಯ್ ಸ್ಕೌಟ್ಸ್ – 1909ರಲ್ಲಿ ಪರಿಚಯಿಸಲಾದ ಈ ಕಾರ್ಯಕ್ರಮವು ಭಾರತದಲ್ಲಿ ಈ ರೀತಿಯ ಮೊದಲನೆಯದು.
- ಬೆಂಗಳೂರಿನಲ್ಲಿರುವ ಭಾರತೀಯ ವಿಜ್ಞಾನ ಸಂಸ್ಥೆ – 1911ರಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯು ಕ್ರಿಯಾತ್ಮಕವಾಗಿ ಕಾರ್ಯ ನಿರ್ವಹಿಸಲು ಪ್ರಾರಂಭಿಸಲು 371 ಎಕರೆ ಭೂಮಿ ಮತ್ತು ಹಣವನ್ನು ದಾನ ಮಾಡಲಾಯಿತು..
- ಎಲ್ಲರಿಗೂ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸಲಾಯಿತು ಮತ್ತು 1915 ರಲ್ಲಿ, ಜಾತಿ ತಾರತಮ್ಯವನ್ನು ತ್ಯಜಿಸುವ ಪ್ರಯತ್ನದಲ್ಲಿ ದಲಿತ ಮಕ್ಕಳನ್ನು ಸೇರಿಕೊಳ್ಳಲು ಸಾರ್ವಜನಿಕ ಶಾಲೆಗಳಿಗೆ ನಿರ್ದೇಶನ ನೀಡಲಾಯಿತು.
- ಸ್ಟೇಟ್ ಬ್ಯಾಂಕ್ ಆಫ್ ಮೈಸೂರು 1913ರಲ್ಲಿ ಸ್ಥಾಪನೆಯಾಯಿತು.
- ಬೆಂಗಳೂರು ಕೃಷಿ ವಿಶ್ವವಿದ್ಯಾಲಯವನ್ನು 1913ರಲ್ಲಿ ಸ್ಥಾಪಿಸಲಾಯಿತು.
- ಕನ್ನಡ ಸಾಹಿತ್ಯ ಪರಿಷತ್ತು 1915ರಲ್ಲಿ ಸ್ಥಾಪನೆಯಾಯಿತು.
- ಅವರು 1916ರಲ್ಲಿ ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಮೊದಲ ಕುಲಪತಿಯಾದರು.
- ಮೈಸೂರು ವಿಶ್ವವಿದ್ಯಾಲಯವನ್ನು 1916ರಲ್ಲಿ ಸ್ಥಾಪನೆಯಾಯಿತು
- ಮೈಸೂರು ವಾಣಿಜ್ಯ ಮಂಡಳಿಯು 1916ರಲ್ಲಿ ಸ್ಥಾಪನೆಯಾಯಿತು.
- ಮೈಸೂರಿನಲ್ಲಿ ವಿಶ್ವವಿದ್ಯಾಲಯದ ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ಮತ್ತು ಮಹಾರಾಣಿ ಮಹಿಳಾ ಕಾಲೇಜು 1917ರಲ್ಲಿ ಸ್ಥಾಪನೆಯಾಯಿತು.
- ಶ್ರೀಗಂಧದ ಎಣ್ಣೆ ಕಾರ್ಖಾನೆಯನ್ನು 1917ರಲ್ಲಿ ಪ್ರಾರಂಭಿಸಲಾಯಿತು.
- ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯನ್ನು 1923ರಲ್ಲಿ ಪ್ರಾರಂಭಿಸಲಾಯಿತು.
- ಕೆ ಆರ್ ಎಸ್ ಅಣೆಕಟ್ಟು – ಮೈಸೂರಿನ ನೀರಾವರಿಗೆ ಈ ಅಣೆಕಟ್ಟು ನಿರ್ಣಾಯಕವಾಗಿತ್ತು ಮತ್ತು ಮಹಾರಾಜರು ಕುಟುಂಬದ ಆಸ್ತಿಗಳನ್ನು ಯೋಜನೆಗೆ ಪ್ರತಿಜ್ಞೆ ಮಾಡಿನ ನಂತರ 1924ರಲ್ಲಿ ನಿರ್ಮಿಸಲಾಯಿತು. ಆ ಸಮಯದಲ್ಲಿ ಇದು ಏಷ್ಯಾದ ಅತಿ ದೊಡ್ಡ ಅಣೆಕಟ್ಟು ಆಗಿತ್ತು.
- ಮೈಸೂರು ವೈದ್ಯಕೀಯ ಕಾಲೇಜು 1924ರಲ್ಲಿ ಪ್ರಾರಂಭವಾಯಿತು.
- ವಾಣಿ ವಿಲಾಸ ಮಹಿಳಾ ಮತ್ತು ಮಕ್ಕಳ ಆಸ್ಪತ್ರೆಯನ್ನು 1934ರಲ್ಲಿ ಸ್ಥಾಪಿಸಲಾಯಿತು.
- ಮೈಸೂರು ಪೇಂಟ್ಸ್ ಮತ್ತು ವಾರ್ನಿಷ್ ಅನ್ನು 1936ರಲ್ಲಿ ಸ್ಥಾಪಿಸಲಾಯಿತು – ಈ ಕಂಪನಿಯು ಇಂದಿಗೂ ಭಾರತದಲ್ಲಿ ಪ್ರತಿ ಚುನಾವಣೆಯ ಸಮಯದಲ್ಲಿ ಬಳಸುವ ಅಳಿಸಲಾಗದ ಶಾಯಿಯನ್ನು ತಯಾರಿಸುತ್ತದೆ.
- ಮಹಾರಾಣಿ ಮಹಿಳಾ ಕಾಲೇಜು 1938ರಲ್ಲಿ ಸ್ಥಾಪನೆಯಾಯಿತು

---

**ಪುಟ 3ರಿಂದ...**

ಆ ಕಪ್ಪೆಗೆ ಹೇಗೆ ಅದನ್ನು ಮಾಡಲು ಸಾಧ್ಯವಾಯಿತು ಎಂದು ಎಲ್ಲರೂ ಕೇಳಿದಾಗ, ಆಗ ವಿಜೇತ ಕಪ್ಪೆ ಹೇಳಿತು, "ನಾನು ಕಿವುಡ, ನನಗೆ ಏನೂ ಕೇಳಿಸುತ್ತಿಲ್ಲ. ನಾನು ಹತ್ತುತ್ತಿರುವಾಗ, ಕೆಳಗೆ ನಿಂತಿದ್ದ ಈ ಎಲ್ಲಾ ಕಪ್ಪೆಗಳು ನನ್ನನ್ನು ಪ್ರೋತ್ಸಾಹಿಸುತ್ತಿವೆ ಎಂದು ನನಗೆ ಅನಿಸಿತು. 'ನೀನು ಅದನ್ನು ಮಾಡಬಹುದು' ಎಂದು ನನ್ನಲ್ಲಿ ನಂಬಿಕೆಯನ್ನಿರಿಸಿದರು. ಅವರೆಲ್ಲರ ಪ್ರೋತ್ಸಾಹದಿಂದಾಗಿ ನಾನು ಕೊನೆಗೂ ಈ ಮರವನ್ನು ಹತ್ತಿದೆ". ಕೊನೆಯಲ್ಲಿ ಅದರ ಗೆಲುವಿಗಾಗಿ ರಾಜಕಪ್ಪೆ ಆ ಕಪ್ಪೆಗೆ ಬಹುಮಾನವನ್ನು ನೀಡಿತು. ಈ ಕಥೆಯಿಂದಾಗಿ ನಾವು ಕಲಿಯುವುದೇನಂದರೆ, ನಮ್ಮ ಸುತ್ತಮುತ್ತಲಿನ ನಕರಾತ್ಮಕ ಯೋಚನೆಗಳತ್ತ ನಮ್ಮ ಗಮನವನ್ನು ಹರಿಸದೇ ನಮ್ಮ ಗುರಿಗಳ ಮೇಲೆ ಮಾತ್ರ ಗಮನಹರಿಸಬೇಕು.

ಜೀವನವೆನ್ನುವುದು ವಿಶಾಲವಾಗಿ ಬೆಳೆದು ನಿಂತಿರುವ ಒಂದು ವೃಕ್ಷದ ಹಾಗೆ. ಅದರಲ್ಲಿ ಬೆಳೆದಿರುವ ಕಾಂಡಗಳು ನಾವು ಆಯ್ಕೆ ಮಾಡಿಕೊಳ್ಳಲಿರುವ ಮಾರ್ಗಗಳು. ಅದರ ಎಲ್ಲ ಕಾಂಡಗಳಲ್ಲಿ ಹಣ್ಣುಗಳು ಬಿಟ್ಟಿರುವುದಿಲ್ಲ. ನಮ್ಮ ಗುರಿ ಯಾವುದೋ ಒಂದು ಕಾಂಡದಲ್ಲಿ ಬೆಳೆದಿರುವ ಹಣ್ಣನ್ನು ಕೀಳುವುದು. ಅದು ಯಾವುದು ಅಂತ ಮೊದಲು ಹುಡುಕಿ, ನಂತರ ಆ ಕಾಂಡವನ್ನು ತಲುಪಿ ಹಣ್ಣನ್ನು ಪಡೆದುಕೊಳ್ಳುವುದು ನಮ್ಮ ಗುರಿಯಾಗಬೇಕು. ಅಂದರೆ ಒಟ್ಟಿನಲ್ಲಿ ಗುರಿ ಸೇರಲು ಸರಿಯಾದ ಮಾರ್ಗವನ್ನು ಆಯ್ಕೆಮಾಡಿಕೊಳ್ಳುವುದಕ್ಕೆ ಮೊದಲ ಆದ್ಯತೆ ನೀಡಬೇಕು

# How old is Hinduism?

✍ **Dr. Viswanathan**

It is very hard to date Hinduism as a whole, and we will avoid controversies such as the origin of the Vedas. Rather we will focus on the various individual practices of present-day Hindus that have been dated to be significantly ancient. We stick to archeology that is carbon dated and scientific.



For instance, here is a Shiv Lingam dated to 2700 BCE that was found in the Kalibangan site in Rajasthan. See more about this artifact. The shape and form is worshipped by most Hindus as their holiest symbol.


From around the same period we have this symbol - the Pashupati seal - that features a seated figure in Yogic pose surrounded by animals. Whether this figure is Shiva or not is a controversy that I see as irrelevant. But, Hindu figures throughout history take such a meditative pose flanked by their animals. Modern Hindu gods have representations that are quite closer to these.

Here is the Swastika symbol from about 4000 years ago. These symbols are across the Indus Valley Civilization. The Swastika is still used as the holiest symbol of Hinduism (many other cultures too use the symbol in varying levels which is again irrelevant for this discussion).





One of the most iconic aspects of the Indus Valley civilisation are these baths that is believed to been used for ceremonial/religious purposes. Interestingly, there are no major temples that are found in this civilisation apart from these ceremonial baths. The baths are believed by many historians to be the central element of the culture.




73: H-182 A col (350%)



In modern day Hinduism, ritual bathing in places known as theerthas is one of the core practices of the religion. Holiest sites in Hinduism such as Kashi, Rameshwaram, Badrinath, Prayag, Haridwar, Nashik, Dharmasthala are all those that have a theertha and where elaborate ritual bathing is done. The temple and the god






figurines next to them are sometimes secondary to the theertha itself. The largest Hindu festivals such as Kumbh Mela and Mahamagam are centered on ritual bathing.

Yoga is one of the key elements of Hinduism that is recognized across the world. Hindu scriptures refer to the asanas but don't describe them in detail taking it for granted. In the recent excavations figurines are found in the 3500 year old artifacts that modern Yoga practitioners would easily relate with.

Hinduism designates certain trees are very sacred. The most sacred the Pipal tree (Ashvattha) apart from plants such as Holy Basil (Tulsi) and Banyan (Nyagrodha). Many of these holy trees are featured prominently in the religious symbols of that period. Here is a processionaround the Ashvattha tree. Now, we stay at the same time period (3500 years ago)





and move a few thousand kilometers west. Here we find this tablet signed by a king named Tushratta of the Mittani kingdom. This treaty is involved in the name of Vedic gods such as Mitra, Agni, Varuna and Indra. Luckily one portion of the treaty is written in stoney and has been carbon



dated.We will again avoid the controversies on Aryans, migrations, invasions etc. Suffice to say that Vedic gods were invoked in a treaty 3500 years ago in a fairly advanced civilization indicating the reverance to them much older than that. Was there a relationship between the two things - Indus Valley civlization and Mittani kingdom? We don't know yet.

****

The practices we follow as Hindu Dharma - worship of Lingam, divinity ascribed to specific trees, Yoga poses, very special status to ritual bathing - theertha snana, key symbols like Swastika and key gods like Agni, Indra and Varuna, are all atleast 3500-4000 years old with hard archeological proofs.



★ ಅನಿಕಾ ಹಾಗೂ ಆರೋಹಿ ಗಸಗಸೆಯ ಪಾಯಸ ಹಾಗೂ ನುಚ್ಚಿನುಂಡೆಯನ್ನು ಚೆನ್ನಾಗಿ ಮಾಡಿದ್ದರು.



★ ಭಾರತಿ ಜೋರಾಪುರ್ ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಮಾಡುವ ಸಿಹಿತಿಂಡಿಯಲ್ಲಿ ಒಂದಾದ ಶೇಂಗಾ ಹೋಳಿಗೆಯನ್ನು ತಂದಿದ್ದರು. ಎಲ್ಲಾ ಭಾಗವಹಿಸಿದ ಅಭ್ಯರ್ಥಿಗಳು ತಿಂಡಿಯನ್ನು ಅಷ್ಟೇ ಅಲ್ಲವೇ ಅದರ video ವನ್ನು ಕೂಡಾ ನಮಗೆ ಕಳುಹಿಸಿ ಕೊಟ್ಟಿದ್ದರು. ಅವರೆಲ್ಲಾ video ದಲ್ಲಿ ತಮ್ಮ ತಿಂಡಿಯ ಬಗ್ಗೆ ಹೇಳುವಾಗ ಯಾವ ರೀತಿಯ ಹೆಮ್ಮೆಯ ಭಾವನೆ ಅವರ ಮುಖದಲ್ಲಿ ಕಾಣುತ್ತಿತ್ತೋ ಕೇಳುವವರೂ ಕೂಡಾ ಅಷ್ಟೇ ಆಸಕ್ತಿಯಿಂದ ಕೇಳುತ್ತಿದ್ದರು. ಮತ್ತು ಎಲ್ಲಾರೂ ಈ ಮೇಳದಲ್ಲಿ ಯಾರು ಗೆಲ್ಲಬಹುದು ಎಂದು ಕುತೂಹಲದಿಂದ ಕಾಯುತ್ತಿದ್ದರು.





ಶ್ರೀಮತಿ ಸುಶೀಲಾ ರಾಮಣ್ಣನವರ 90 ವರ್ಷದ ಅನುಭವದಿಂದ ಮಾಡಿದ ತಿಂಡಿ ನಿರ್ಣಾಯಕರ ನಿರ್ಣಯ ಸರಿ ಎನಿಸುವಂತೆ ಮಾಡಿತು. ಅವರ ಜೊತೆಗೆ ರೋಹಿಣಿ ಜರೆಯವರ ಚಿರೋಟಿ (ಮದುವೆ, ಮುಂಜಿಯಲ್ಲಿ ಮಾಡುವಂತದ್ದು) ಕೂಡಾ ಅಷ್ಟೇ ರುಚಿಯನ್ನು ಹೊಂದಿತ್ತು. ಇವರಿಬ್ಬರೂ ಸಮಾಧಾನಕರ ಬಹುಮಾನವನ್ನು ಬಾಚಿಕೊಂಡರು.

ಶ್ರೀಮತಿ ಸರೋಜಾ ಪರಾಂದೆ (ತಂಬಿಟ್ಟು) ಮೂರನೇ ಬಹುಮಾನ, ಶ್ರೀಮತಿ ನಂದಾ ರಾವ್ (ರಾಗಿ ಹಲ್ವಾ) ಎರಡನೆಯ ಬಹುಮಾನ

ಶ್ರೀಮತಿ ರೋಹಿಣಿ ಪುಟ್ಟು (ನುಚ್ಚಿನುಂಡೆ) ಒಂದನೇ ಬಹುಮಾನ ಇವರೆಲ್ಲರ ಮಡಿಲು ಸೇರಿತ್ತು.





ಆ ದಿನದ ಸುಂದರ ಸಂಜೆಯ ಅಡುಗೆ ಮಾಡಿ ತಂದ ಎಲ್ಲರನ್ನ ಪಾಕ ಪ್ರವೀಣರಾಗಿ ಮಾಡಿದರೆ ಬಹು ಮಾನದ ವಿಜೇತರನ್ನು ಪಾಕ ಕಲಾ ನಿಪುಣೆಯರಾಗಿ ಮಾಡಿತ್ತು. ಇದಾದ ನಂತರ ಎಲ್ಲರೂ ತಾವು ಮಾಡಿ ತಂದ ತಿಂಡಿಯನ್ನು ಎಲ್ಲರೊಂದಿಗೆ ಪ್ರೀತಿಯಿಂದ ಹಂಚಿ ಸವಿದರು. ಇಷ್ಟೆಲ್ಲಾ ಜನರ ಇಂಥಾ ಹುರುಪನ್ನು ನೋಡಿ ಮತ್ತೆ ಮುಂದಿನ ವರ್ಷ ಇದೇ ರೀತಿಯ ಮೇಳವನ್ನು ಜೊತೆಗೂಡಿ ಮಾಡೋಣ ಅಲ್ಲಿ ತನಕ ನಮ್ಮ ಜೊತೆ ಹೀಗೆ ಸೇರಿ...

ವರದಿ : **ರೇಷ್ಮಾ ಶಂಕರಲಿಂಗ**

# ಮೈಸೂರು ಅಸೋಸಿಯೇಷನ್, ಮುಂಬೈ

# The Mysore Association, Bombay

**Centenary Celebrations 2025**

*presents*



## "Karnatic CLASSICAL MUSIC"

*by* **Anjali Sriram**

(Student of Smt. Vid. M. S. Sheela)

*Violin :* **Vid. Satish Sheshadri**

*Mridangam :* **Vid. Raghu Bhagavat B R**

***Saturday, 19th July 2025 at 6.30 p.m.***

*Venue :* The Mysore Association's Auditorium, 393, Bhau Daji Road, Matunga (Central), Mumbai -400 019.

*All are cordially Invited*

## 'ಹೊರನಾಡ ಕನ್ನಡ ಕಟ್ಟಾಳು' ಹಿರಿಯ ಸಾಹಿತಿ ಡಾ. ಜಿ. ಡಿ. ಜೋಶಿ ನಿಧನ



ಮುಂಬಯಿಯ ಹಿರಿಯ ಕನ್ನಡ ಸಾಹಿತಿ, ಘಾಸ್ಕೋಪರ್‌ನ ಝುನ್‌ಝುನ್‌ವಾಲ ಕಾಲೇಜ್‌ನ ಸೇವಾ ನಿವೃತ್ತ ಪ್ರಾಂಶುಪಾಲ, ಕರ್ನಾಟಕ ಸಂಘ ಮುಂಬಯಿ ಇದರ ಮಾಜಿ ಅಧ್ಯಕ್ಷ, ಕರ್ನಾಟಕ ಮಲ್ಲದಲ್ಲಿ ಹಲವು ಕಾಲ ಅಂಕಣಕಾರರಾಗಿದ್ದ 'ಕನ್ನಡ ಕಟ್ಟಾಳು' ಎಂದೇ ಚಿರಪರಿಚಿತರಾದ ಡಾ. ಜಿ. ಡಿ. ಜೋಶಿ (91) ಅವರು ಜೂ. 23ರ ರಾತ್ರಿ 10. 15ಕ್ಕೆ ಮಲಾಡ್‌ನ ತಮ್ಮ ಪುತ್ರ ಉದಯ ಜೋಶಿ ಅವರ ಸ್ವಗೃಹದಲ್ಲಿ ನಿಧನರಾದರು.

ಡಾ. ಜಿ. ಡಿ. ಜೋಶಿ ಅವರು ಇಬ್ಬರು ಪುತ್ರರಾದ ಉದಯ ಜೋಶಿ ಮತ್ತು ಸಂಜಯ್ ಜೋಶಿ ಸಹಿತ ಅಪಾರ ಸಾಹಿತ್ಯಾಭಿಮಾನಿಗಳನ್ನು, ಬಂಧು–ಮಿತ್ರರನ್ನು ಅಗಲಿದ್ದಾರೆ.

28–08–1933ರಂದು ಗದಗ ಜಿಲ್ಲೆಯ ಬೆಳ್ಳಟ್ಟಿಯಲ್ಲಿ ಜನಿಸಿದ ಡಾ. ಜೋಶಿಯವರು, ಬೆಳ್ಳಟ್ಟಿ ಸೂರಣಗಿ ಮತ್ತು ಗಳಗನಾಥಗಳಲ್ಲಿ ಉಚ್ಚಪ್ರಾಥಮಿಕ ಶಾಲೆ ಶಿಕ್ಷಣಪಡೆದು, ನಂತರ ಮುಂಬಯಿಯ ಎನ್ ಕೆ ಇಎಸ್ ಶಾಲೆಯಲ್ಲಿ ಪ್ರೌಢ ಶಿಕ್ಷಣ, ರಾಮನಾರಾಯಣ ರೂಯಾ ಕಾಲೇಜು ಮುಂಬಯಿ ಇಲ್ಲಿ 1955ರಲ್ಲಿ ಬಿಎ ಪದವಿ ಪಡೆದರು. ಡಿ ಜಿ ರೂಪಾರೇಲ್ ಕಾಲೇಜಿನಲ್ಲಿ ಎಂ.ಎ ಕನ್ನಡ ಪದವಿ ಪಡೆದು, ನಂತರ ಸೈಂಟ್ ಜೇವಿಯರ್ಸ್ ನಲ್ಲಿ ಬಿ ಎಸ್, ಕರ್ನಾಟಕ ವಿವಿ.ಧಾರವಾಡದಲ್ಲಿ ಪಿಎಚ್‌ಡಿ ಪದವಿ 1994ರಲ್ಲಿ ಪಡೆದರು. ಹುಯಿಲಗೋಳ ನಾರಾಯಣರಾಯರ ಜೀವನ ಹಾಗೂ ಸಾಹಿತ್ಯ ಅವರ ಮಹಾಪ್ರಬಂಧವಾಗಿದೆ. ಅವರು ಎಂ.ಎಂ.ಕೆ ಕಾಲೇಜ್, ರೂಪರೇಲ್ ಕಾಲೇಜ್, ಝುನ್‌ಝುನ್‌ವಾಲ ಕಾಲೇಜ್‌ಗಳಲ್ಲಿ 1966 ರಿಂದ1 984ರ ತನಕ ಉಪನ್ಯಾಸಕಾರಾಗಿ, ನಂತರ ಕನ್ನಡ ವಿಭಾಗದ ಪ್ರಮುಖರಾಗಿ ಸೇವೆ ಸಲ್ಲಿಸಿದ್ದರು. ರಾಮನಿರಂಜನ ಝುನ್‌ಝುನ್‌ವಾಲಾ ಕಾಲೇಜ್‌ನಲ್ಲಿ 1984–1990ರಲ್ಲಿ ಉಪ ಪ್ರಾಂಶುಪಾಲರು ಮತ್ತು 1991–93 ರಲ್ಲಿ ಪ್ರಾಂಶುಪಾಲರಾಗಿದ್ದರು. ಮುಂಬಯಿ ವಿವಿಯಲ್ಲಿ (ಎಂ.ಎ, ಎಂ.ಫಿಲ್. ಕನ್ನಡ) 1972ರಿಂದ 1995ರ ತನಕ ಬೋಧನೆ ಮಾಡಿದ್ದರು. 1987–1995ರಲ್ಲಿ ಮುಂಬಯಿ ವಿವಿ.ಯ ಕನ್ನಡ ಅಭ್ಯಾಸಮಂಡಳ ಇದರ ಅಧ್ಯಕ್ಷರಾಗಿದ್ದರು. 2010ರಿಂದ 2013ರ ತನಕ ಅವರು ಕರ್ನಾಟಕ ಸಂಘ ಮುಂಬಯಿ ಇದರ ಅಧ್ಯಕ್ಷರಾಗಿಯೂ ಕನ್ನಡದ ಸೇವೆಗೈದಿರುತ್ತಾರೆ.

ಹತ್ತಕ್ಕೂ ಹೆಚ್ಚು ಪ್ರಬಂಧ ಸಂಕಲನಗಳನ್ನು ಪ್ರಕಟಿಸಿರುವ ಜೋಶಿಯವರು, 1971 ರಲ್ಲಿ 'ಪೌರನೀತಿ', ಹಾಗೂ 'ಭಾರತ ಆಡಳಿತ' ಎಂಬ ಕೃತಿಗಳನ್ನೂ ಪ್ರಕಟಿಸಿರುವರು ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರು, ಕನ್ನಡದ ಕಣ್ಮಣಿಗಳು, ಕನ್ನಡದ ಕಾರಣ ಪುರುಷರು, ಕನ್ನಡವನ್ನು ಮುನ್ನಡೆಸಿದವರು....ಮುಂತಾಗಿ ಕವಿ ಕಾವ್ಯ ಪರಿಚಯದ ಕೃತಿಗಳು, ಸಂಪಾದಿತ ಕೃತಿಗಳ ಸಹಿತ ಸುಮಾರು ಮೂವತ್ತರಷ್ಟು ಕೃತಿಗಳನ್ನು ಅವರು ಹೊರತಂದಿದ್ದಾರೆ.

ಕರ್ನಾಟಕ ಮಲ್ಲದಲ್ಲಿ ಅವರು ಪ್ರತೀ ಸೋಮವಾರ ಸಾಹಿತಿಗಳನ್ನು ಪರಿಚಯಿಸುತ್ತಿದ್ದ ಅಂಕಣ ಬರಹಗಳ ಕೃತಿಗಳೂ ಪ್ರಕಟವಾಗಿ ಜನಮೆಚ್ಚುಗೆ ಗಳಿಸಿವೆ. ಕರ್ನಾಟಕ ಸಂಘ ಮುಂಬಯಿ ಇದರ ಸಂಬಂಧ ಪತ್ರಿಕೆಯ ಸಂಪಾದಕರಾಗಿಯೂ ಹಲವುಕಾಲ ಸೇವೆ ಸಲ್ಲಿಸಿದ್ದರು.

ಡಾ. ಜಿ. ಡಿ ಜೋಶಿ ಪ್ರತಿಷ್ಠಾನದಿಂದ 'ಮನೆಮನೆಯಲ್ಲಿ ಸಾಹಿತ್ಯ ಕಾರ್ಯಕ್ರಮ' ಎನ್ನುವ ವಿಶಿಷ್ಟ ಕಾರ್ಯಕ್ರಮ ಬಹಳ ವರ್ಷಗಳು ನಡೆದಿತ್ತು. ಕಾಪರದ ಮಹಾರಾಷ್ಟ್ರ ಘಟಕದ ಅಧ್ಯಕ್ಷರಾಗಿ ಅವರು 1998ರಿಂದ 2004 ರ ತನಕ ಎರಡು । ಅವಧಿಗೆ ಅಧ್ಯಕ್ಷರಾಗಿದ್ದರು. ಆವಾಗ 'ಮಹಾರಾಷ್ಟ್ರ ಕನ್ನಡ ಕಥಾಸಂಕಲನ' ಎನ್ನುವ ವಿವಿಧ ಕತೆಗಾರರ ಪ್ರಾತಿನಿಧಿಕ ಕತಾಸಂಕಲನವನ್ನು ಪ್ರಕಟಿಸಿದ್ದರು. 'ಸಾರ್ಥಕತೆಯ ಹೆಜ್ಜೆ ಗುರುತುಗಳು' (2008) ಡಾ. ಜೋಶಿಯವರ 75ರ ಸಂಭ್ರಮದ ಅಭಿನಂದನಾ ಗ್ರಂಥವಾಗಿದೆ.

ಹೊರನಾಡ ಕನ್ನಡ ಕಟ್ಟಾಳು ಪ್ರಶಸ್ತಿ, ಬಿಎಂಶ್ರೀ ಸಾಹಿತ್ಯ ಪ್ರಶಸ್ತಿ, ಹೃದಯವಂತರು ಪ್ರಶಸ್ತಿ, ರಾಷ್ಟ್ರ ಮನುಕುಲ ಪ್ರಶಸ್ತಿ, ಬೆಂಗಳೂರಿನ ಭಾರತ ರತ್ನ ಪ್ರಶಸ್ತಿ, ಸುವರ್ಣ ಕನ್ನಡಿಗ ಪ್ರಶಸ್ತಿ, ಭಾರತ ಜ್ಯೋತಿ ಪ್ರಶಸ್ತಿ,... ಮುಂತಾದ ಪ್ರಶಸ್ತಿಗಳ ಸಹಿತ ನೂರರಷ್ಟು ವಿವಿಧ ಸಂಘಸಂಸ್ಥೆಗಳಿಂದ ಸನ್ಮಾನಗಳು ಅವರಿಗೆ ದೊರೆತಿವೆ. ಮುಂಬಯಿಯಲ್ಲಿ ಕನ್ನಡ ಪ್ರಾಧ್ಯಾಪಕನೊಬ್ಬ ಮೊಟ್ಟ ಮೊದಲನೆಯದಾಗಿ ಡಿಗ್ರಿ ಕಾಲೇಜ್‌ನ ಪ್ರಿನ್ಸಿಪಾಲರಾಗಿ (1991) ಹುದ್ದೆ ಸ್ವೀಕರಿಸಿದ ಶ್ರೇಯಸ್ಸು ಡಾ. ಜಿ. ಡಿ. ಜೋಶಿಯವರದ್ದಾಗಿದೆ

Edited by Dr. Jyothi Satish, Printed & Published by Hon. Secretary, The Mysore Association Bombay, Mumbai - 400019. Tel: 2403 7065
Email : mysoreassociation.mumbai@gmail.com Website: www.mysoreassociation.in Printed by Aarati Art Printers, Fort, Mumbai - 1 Mob.: 98201 60077